

# ರೈಲು ಪ್ರಯಾಣದಲ್ಲಿ ದಿವ್ಯತ್ರಯರು

ಸ್ವಾಮಿ ಪರಹಿತಾನಂದ

ಭಾರತವು ಇನ್ನೂ ಬ್ರಿಟಿಷರ ಆಳ್ವಿಕೆಯಲ್ಲಿದ್ದ ಕಾಲದಲ್ಲೇ ದಿವ್ಯತ್ರಯರ ಆಗಮನವಾಯಿತು. ಇನ್ನೂ ಆಧುನಿಕತೆಗೆ ತೆರೆದುಕೊಳ್ಳುತ್ತಿದ್ದ ಭಾರತದಲ್ಲಿ ರೈಲುಗಾಡಿಗಳ ಆಗಮನ ಹೊಸ ಒಂದು ಬದಲಾವಣೆಯನ್ನೇ ಉಂಟುಮಾಡಿತು. ಈ ಚಾರಿತ್ರಿಕ ಹಿನ್ನೆಲೆಯಲ್ಲಿ ದಿವ್ಯತ್ರಯರು ಮಾಡಿದ ರೈಲುಯಾತ್ರೆಯ ಬಗ್ಗೆ ಇಲ್ಲಿ ವಿವರಿಸಲಾಗಿದೆ. ಲೇಖಕರು ಉದಕಮಂಡಲ ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಜೀವನ ಪಯಣ ನಿರಂತರವಾಗಿ ಸಾಗುತ್ತದೆ. ಕಾಲಚಕ್ರ ಯಾರಿಗಾಗಿಯೂ ಕಾಯದೆ ಅನವರತ ಉರುಳುತ್ತಿದೆ. ಜನನ-ಮರಣ ಚಕ್ರದಲ್ಲಿ ಸಿಲುಕಿ ನೊಂದು-ಬೆಂದ ಜೀವಿಯು ಮುಕ್ತಿಗಾಗಿ ಪ್ರತಿಕ್ಷಣ ಹಾತೊರೆಯುತ್ತಿದೆ. ಕಾಲಕಾಲಕ್ಕೆ ನಮ್ಮಲ್ಲಿ ಸುಪ್ತವಾಗಿರುವ ದೈವತ್ವವನ್ನು ನೆನಪಿಸಲು ಮತ್ತು ನಮ್ಮನ್ನು ನಮ್ಮ ನಿಜ ನೆಲೆಯೆಡೆಗೆ ಕರೆದೊಯ್ಯಲು ಅವತಾರ ಪುರುಷರ ಜನ್ಮವಾಗುತ್ತಿದೆ. ಅವತಾರ ಪುರುಷರು ನಮ್ಮೊಡನೆ ನಮ್ಮಂತೆಯೇ ಜೀವನ ಸಾಗಿಸುವುದಲ್ಲದೆ ನಮ್ಮ ಬಾಳನ್ನು ಹಸನಾಗಿಸಿ, ದೈವೀಕರಿಸುತ್ತಾರೆ. ದಿವ್ಯತ್ರಯರ ಜೀವನ ಇದಕ್ಕೆ ನಿದರ್ಶನ. ದಿವ್ಯತ್ರಯರು ತಮ್ಮ ಜೀವನದಲ್ಲಿ ಅನೇಕ ಉಪದೇಶಗಳನ್ನು ನೀಡಿರುವುದಲ್ಲದೆ, ಅವುಗಳನ್ನು ತಮ್ಮ ಜೀವನದಲ್ಲಿ ಅಕ್ಷರಶಃ ಪಾಲಿಸಿ ತೋರಿಸಿದ್ದಾರೆ. ಮಾತು-ಕೃತಿ ಒಂದೇ ಆಗಿರುವುದು ಅವತಾರಪುರುಷರ ವೈಶಿಷ್ಟ್ಯ. ಅವತಾರ ಪುರುಷರ ಜೀವನದ ಪ್ರತಿಯೊಂದು ಸಾಮಾನ್ಯ ಘಟನೆಯೂ ಸಹ ವಿಶೇಷತೆಯನ್ನು ಹೊಂದಿರುತ್ತದೆ. ಅದಲ್ಲದೆ ಭಕ್ತನಾದವನಿಗೆ ತನ್ನ ಇಷ್ಟದೇವತೆಯ ಬಗೆಗಿನ ಎಲ್ಲಾ ವಿಷಯಗಳು ಅಸಾಮಾನ್ಯವಾಗಿ ಕಾಣುತ್ತವೆ. ಅವತಾರ ಪುರುಷರು ಹೇಗೆ ನಡೆಯುತ್ತಾರೆ? ಹೇಗೆ ಕುಳಿತುಕೊಳ್ಳುತ್ತಾರೆ? ಹೇಗೆ ಮಾತನಾಡುತ್ತಾರೆ? ಎಲ್ಲಿಗೆ ತೀರ್ಥಯಾತ್ರೆಗೆ ಹೋಗುತ್ತಾರೆ? ಹೇಗೆ ಹೋಗುತ್ತಾರೆ? ಏನು ಮಾಡುತ್ತಾರೆ? ಎನ್ನುವ ಅನೇಕ ಕುತೂಹಲಕಾರಿ ಪ್ರಶ್ನೆಗಳು ಭಕ್ತನ ಮನದಲ್ಲಿ ಪುಟಿದೇಳುತ್ತಲೇ ಇರುತ್ತವೆ. ಲೀಲಾ ಚಿಂತನಕ್ಕೆ ಸಹಕಾರಿಯಾಗುವ ಹಲವು ಅಂಶಗಳನ್ನು ಅವಲೋಕಿಸುತ್ತಲೇ ಇರುತ್ತಾನೆ ಭಕ್ತ. ನಾವೂ ಸಹ ಈಗ ದಿವ್ಯತ್ರಯರ ಜೀವನದಲ್ಲಿ ಅವರು ಅನೇಕ ಸಂದರ್ಭದಲ್ಲಿ ಮಾಡಿದ ರೈಲು ಪ್ರಯಾಣದ ವಿಶೇಷತೆಗಳ ಬಗ್ಗೆ ಮೆಲುಕು ಹಾಕೋಣ.

## ಶ್ರೀರಾಮಕೃಷ್ಣರ ರೈಲುಯಾತ್ರೆ

ಶ್ರೀರಾಮಕೃಷ್ಣರ ದಿವ್ಯಲೀಲಾ ಜೀವನದಲ್ಲಿ ಅನೇಕರು ಅವರಿಗೆ ಸಹಾಯಕರಾಗಿದ್ದರು. ಇಲ್ಲಿ ಮಥುರನಾಥನ ಹೆಸರು ಉಲ್ಲೇಖನೀಯ. ಒಮ್ಮೆ ಅವನು ಶ್ರೀರಾಮಕೃಷ್ಣರನ್ನು ತೀರ್ಥಯಾತ್ರೆಗೆ ತನ್ನ ಬೃಹತ್ ರಾಜಪರಿವಾರದೊಡನೆ ಕರೆದುಕೊಂಡು ಹೋಗುತ್ತಾನೆ. ಮಥುರನಾಥ, ಅವನ ಪತ್ನಿ, ಮಥುರನಾಥ ಪರಂಪರೆಯ ಗುರುವಿನ ಮಕ್ಕಳು ಮತ್ತು ಇತರರು, ಶ್ರೀರಾಮಕೃಷ್ಣರು, ಚಂದ್ರಮಣಿದೇವಿ, ಹೃದಯರಾಮ, ಬ್ರಾಹ್ಮಣ ಅಡುಗೆಯವನು, ಸ್ತ್ರೀ ಮತ್ತು ಪುರುಷ ಸೇವಕರು... ಹೀಗೆ ಒಟ್ಟಿಗೆ ಒಂದು ನೂರ ಇಪ್ಪತ್ತೈದು ಜನರು ೧೮೬೮ರ ಜನವರಿ ೨೭ ರಂದು ಉತ್ತರ ಭಾರತದ ಪ್ರಮುಖ ತೀರ್ಥಸ್ಥಳಗಳಿಗೆ ಯಾತ್ರೆ ಹೋಗುವುದೆಂದು ನಿಶ್ಚಯವಾಯಿತು. ಅವರೆಲ್ಲರೂ ಸಹ ರೈಲು ಪ್ರಯಾಣ ಮಾಡುವುದೆಂದು ನಿರ್ಣಯ ಮಾಡಿದ್ದರು. ಆದ್ದರಿಂದ ಮಥುರನಾಥನು ದ್ವಿತೀಯ ದರ್ಜೆಯ ನಾಲ್ಕು ಬೋಗಿಗಳನ್ನು ರೈಲ್ವೆ ಕಂಪನಿಯವರಿಂದ ಕಾಯ್ದಿರಿಸಿದನು. ಅವನು ಎಲ್ಲಿ ಇಚ್ಛಿಸುತ್ತಾನೊ ಅಲ್ಲಿ ಆ ನಾಲ್ಕು ಬೋಗಿಗಳನ್ನು ಬೇರ್ಪಡಿಸುವ ವ್ಯವಸ್ಥೆಯಾಗಿತ್ತು. ಕೊಲ್ಕತ್ತಾ ಮತ್ತು ವಾರಾಣಾಸಿ ಮಾರ್ಗದಲ್ಲಿ ಮಥುರನು ಇಚ್ಛೆಪಟ್ಟಂತೆ ಬೋಗಿಗಳನ್ನು ಬೇರ್ಪಡಿಸಿ ಕೆಲವು ದಿನಗಳ ನಂತರ ಮುಂದಿನ ಯಾತ್ರೆಗಾಗಿ ಪುನಃ ರೈಲಿಗೆ ಸೇರ್ಪಡಿಸುವ ವ್ಯವಸ್ಥೆಯನ್ನು ಮಾಡಲಾಗಿತ್ತು. ಈ ಯಾತ್ರೆಯಲ್ಲಿ ಮೊದಲಿಗೆ ಅವರು ದೇವಘರದಲ್ಲಿ ಶ್ರೀ ವೈದ್ಯನಾಥನ ದರ್ಶನ ಮಾಡಿದರು. ಕೆಲವು ದಿನಗಳು ಅಲ್ಲಿಯೇ ಉಳಿದಿದ್ದರು. ಒಂದು ಮಹತ್ವದ ಘಟನೆಯನ್ನು ಇಲ್ಲಿ ನಾವು ಸ್ಮರಿಸಬಹುದು. ಆ ಗ್ರಾಮದ ಬಡವರ ದುಃಸ್ಥಿತಿಯನ್ನು ನೋಡಿ ಶ್ರೀರಾಮಕೃಷ್ಣರ ಹೃದಯವು ಕರುಣೆ




ಯಿಂದ ತುಂಬಿತು. ಆ ಬಡವರಿಗೆ ಹೊಟ್ಟೆ ತುಂಬಾ ಊಟ ಮತ್ತು ಬಟ್ಟೆಗಳನ್ನು ನೀಡಲು ಅವರು ಮಥುರನನ್ನು ವಿನಂತಿಸಿದರು. ಮೊದಲು ಅವನು ಹಿಂಜರಿದಿದ್ದುದನ್ನು ಕಂಡ ಅವರು ಮಗುವಿನಂತೆ ಪಟ್ಟು ಹಿಡಿದು ಆ ಬಡವರ ಮಧ್ಯೆ ಹೋಗಿ ಕುಳಿತುಕೊಂಡು ಅವರುಗಳಿಗೆ ಸಹಾಯ ಮಾಡದಿದ್ದರೆ ಅವರೊಂದಿಗೇ ತಾವು ಇದ್ದುಬಿಡುವುದಾಗಿ ಹೇಳಿದರು. ಕೊನೆಗೆ ಮಥುರನು ಮುಂದಿನ ಯಾತ್ರೆಯ ಖರ್ಚಿನ ಬಗ್ಗೆ ಯೋಚನೆಯನ್ನು ಬಿಟ್ಟು ಶ್ರೀರಾಮಕೃಷ್ಣರ ಇಚ್ಛೆಯಂತೆ ಆ ಬಡವರಿಗೆ ಸಹಾಯ ಮಾಡಿದನು. ಪ್ರಸ್ತುತ ಶ್ರೀರಾಮಕೃಷ್ಣ ಮಿಷನ್ ಸಂಸ್ಥೆಯ ಮೂಲಕ ನಡೆಯುತ್ತಿರುವ ಅಪರಿಮಿತ ಪರಿಹಾರ ಕಾರ್ಯಗಳಿಗೆ ಸ್ವತಃ ಶ್ರೀರಾಮಕೃಷ್ಣರೇ ಹೀಗೆ ಚಾಲನೆ ನೀಡಿದ್ದರು.

ದೇವಘರದಿಂದ ಅವರೆಲ್ಲರೂ ಸಹ ನೇರವಾಗಿ ವಾರಾಣಸಿ ಕಡೆಗೆ ಹೊರಟರು. ಈ ಯಾತ್ರೆಯಲ್ಲಿ ಒಂದು ಘಟನೆ ನಡೆಯಿತು ವಾರಾಣಸಿಗೆ ಹತ್ತಿರದ ಒಂದು ಊರಿನ ರೈಲು ನಿಲ್ದಾಣದಲ್ಲಿ ಶ್ರೀರಾಮಕೃಷ್ಣರು ಮತ್ತು ಹೃದಯನು ಯಾವುದೋ ಕಾರಣಕ್ಕಾಗಿ ರೈಲಿನಿಂದ ಕೆಳಗೆ ಇಳಿದಿದ್ದರು. ಅವರು ಮರಳಿ ಬೋಗಿಯನ್ನು ಹತ್ತುವ ಮೊದಲೇ ರೈಲುಗಾಡಿಯು ಹೊರಟುಬಿಟ್ಟಿತು. ಮಥುರನಾಥನು ತುಂಬಾ ಚಿಂತಿತನಾದನು. ವಾರಾಣಸಿ ತಲುಪಿದ ನಂತರ ಅವರನ್ನು ನಂತರದ ರೈಲಿನಲ್ಲಿ ವಾರಾಣಸಿಗೆ ಕಳುಹಿಸಿ ಎಂದು ತಂತಿ ಸಂದೇಶವನ್ನು ನೀಡಿದ ಮಥುರನಾಥ. ಆದರೆ ಶ್ರೀ ರಾಮಕೃಷ್ಣರಿಗೆ ಅದಕ್ಕಾಗಿ ಕಾಯಬೇಕಾಗಲಿಲ್ಲ. ಈ ದಿವ್ಯ ಪುರುಷರಿಗಾಗಿಯೇ ದೈವ ನಿಯಮದಿಂದ ವ್ಯವಸ್ಥೆಗೊಂಡಂತೆ ಆ ದಿನ ಆಕಸ್ಮಾತ್ತಾಗಿ ರೈಲ್ವೇ ಕಂಪನಿಯ ವಿಶೇಷ ಅಧಿಕಾರಿ ರಾಜೇಂದ್ರ ಬಂದೋಪಾಧ್ಯಾಯನು ಮೇಲ್ವಿಚಾರಣೆಯ ಕಾರ್ಯದ ಮೇಲೆ ಅಲ್ಲಿಗೆ ಒಂದು ವಿಶೇಷ ರೈಲಿನಲ್ಲಿ ಸ್ವಲ್ಪ ಸಮಯದ ಬಳಿಕವೇ ಬಂದಿಳಿದನು. ಅವನು ಕೊಲಕತ್ತಾದ ಬಾಘಬಜಾರಿನಲ್ಲಿ ವಾಸಿಸುತ್ತಿದ್ದನು. ಶ್ರೀ ರಾಮಕೃಷ್ಣರು ಮತ್ತು ಹೃದಯ ಇಬ್ಬರೂ ಆ ನಿಲ್ದಾಣದಲ್ಲಿ ಅಸಹಾಯಕರಾಗಿರುವುದನ್ನು ಕಂಡು ತಕ್ಷಣವೇ ಅವರನ್ನು ತನ್ನೊಡನೆ ವಿಶೇಷ ರೈಲಿನಲ್ಲಿ ಕರೆದುಕೊಂಡು ಹೋಗಿ ವಾರಾಣಸಿ ರೈಲು ನಿಲ್ದಾಣಕ್ಕೆ ತಲುಪಿಸಿದನು. ಅಲ್ಲಿ ಕಾತರದಿಂದ ಕಾಯುತ್ತಿದ್ದ ಮಥುರನಾಥನು ತನ್ನ ಪ್ರಿಯ ತಂದೆ – ಹೀಗೆ ವಿಶೇಷ ವ್ಯಕ್ತಿಯಂತೆ ಗೌರವ–ಆದರದಿಂದ ಬರುತ್ತಿರುವುದನ್ನು ಕಂಡು ಅತ್ಯಂತ ಆನಂದಿತನಾದನು.

ವಾರಾಣಸಿಯಲ್ಲಿ ಎಲ್ಲಾ ದೇವಸ್ಥಾನ ಮತ್ತು ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಲು ಶ್ರೀರಾಮಕೃಷ್ಣರಿಗಾಗಿ ವಿಶೇಷವಾದ ಪಲ್ಲಕ್ಕಿ ವ್ಯವಸ್ಥೆ ಮಾಡಿದ್ದನು. ವಾರಾಣಸಿಯಲ್ಲಿ ಐದಾರು ದಿನಗಳಿದ್ದ ನಂತರ ಅವರೆಲ್ಲರೂ ಪ್ರಯಾಗಕ್ಕೆ (ತ್ರಿವೇಣಿ ಸಂಗಮ) ಹೋದರು. ಪ್ರಯಾಗದಿಂದ ಪುನಃ ವಾರಾಣಸಿಗೆ ಬಂದು ಹದಿನೈದು ದಿನಗಳಿದ್ದರು. ನಂತರ ಬೃಂದಾವನಕ್ಕೆ ಹೋಗಿ ಅಲ್ಲಿಯೂ ಸಹ ಹದಿನೈದು ದಿನಗಳಿದ್ದರು. ಬೃಂದಾವನದಿಂದ ಪುನಃ ವಾರಾಣಸಿಗೆ ಬಂದು ೧೮೬೮ರ ಮಧ್ಯದವರೆಗೆ ಅಲ್ಲಿಯೇ ಕಳೆದರು. ಮಥುರನಾಥನಿಗೆ ವಿಷ್ಣುವಿನ ಪುಣ್ಯ ಸ್ಥಳವಾದ ಗಯಾಧಾಮಕ್ಕೆ ಹೋಗುವ ಇಚ್ಛೆಯಿತ್ತು. ಆದರೆ ಶ್ರೀರಾಮಕೃಷ್ಣರು ಅಲ್ಲಿಗೆ ಹೋಗಲು ನಿರಾಕರಿಸಿದ್ದರಿಂದ ಅವರೆಲ್ಲರೂ ಸಹ ನಾಲ್ಕು ತಿಂಗಳ ಈ ತೀರ್ಥಯಾತ್ರೆ ಮುಗಿಸಿಕೊಂಡು ರೈಲಿನಿಂದ ದಕ್ಷಿಣೇಶ್ವರಕ್ಕೆ ಮರಳಿ ಬಂದರು.

### ಶ್ರೀಮಾತೆ ಶಾರದಾದೇವಿಯವರು

ಶ್ರೀಮಾತೆಯವರು ಶ್ರೀರಾಮಕೃಷ್ಣರಿಗಿಂತಲೂ ಅಧಿಕವಾಗಿ ರೈಲು ಪ್ರಯಾಣ ಮಾಡಿರುವರು. ಶ್ರೀಮಾತೆಯವರು ಅನೇಕ ತೀರ್ಥಸ್ಥಳಗಳಿಗೆ ಭೇಟಿ ನೀಡಿದ್ದಾರೆ. ಶ್ರೀರಾಮಕೃಷ್ಣರು ಸ್ಥೂಲ ಶರೀರದಿಂದ ದರ್ಶಿಸಲಾಗದ ತೀರ್ಥಸ್ಥಾನಗಳಿಗೆ ಶ್ರೀಮಾತೆಯವರು ಅವರ ಭಾವಚಿತ್ರವನ್ನು ತೆಗೆದುಕೊಂಡು ಹೋಗಿ ದರ್ಶನ ಮಾಡಿರುವುದು ವಿಶೇಷವಾಗಿದೆ. ಸ್ವಭಾವತಃ ಲಜ್ಜಾಶೀಲರಾದ ಶ್ರೀಮಾತೆಯವರು ದಕ್ಷಿಣೇಶ್ವರದಲ್ಲಿ ವಾಸಿಸುತ್ತಿರುವಾಗ ಜನರ ಕಣ್ಣಿಗೂ ಬೀಳದಂತೆ ಅಜ್ಞಾತವಾಸ ಮಾಡಿದ್ದರು. ಶ್ರೀರಾಮಕೃಷ್ಣರ ದೇಹಾವಸಾನದ ಬಳಿಕ ಶ್ರೀಮಾತೆಯವರು ಭಕ್ತರೊಡನೆ ವಿವಿಧ ಸ್ಥಾನಗಳಿಗೆ ಯಾತ್ರೆ ಮಾಡಿದ್ದರು. ಈ ಯಾತ್ರೆಗಳಲ್ಲಿ ಬಹುಭಾಗ ಅವರು ರೈಲು ಪ್ರಯಾಣವನ್ನು ಮಾಡಿರುವರು. ಬಹುದೂರದ ದಕ್ಷಿಣ ಭಾರತದ ಯಾತ್ರೆಯನ್ನು ಮಾಡಿ ತಮ್ಮ ಪವಿತ್ರ ಪಾದಧೂಳಿಯಿಂದ ಆ ಸ್ಥಾನಗಳನ್ನು ಪಾವನಗೊಳಿಸಿರುವರು. ಮೊಟ್ಟ ಮೊದಲ ಬಾರಿಗೆ ಮಕ್ಕಳು ರೈಲು ಪ್ರಯಾಣವನ್ನು ಮಾಡಿ ಆನಂದ ಪಡುವಂತೆಯೇ ಶ್ರೀಮಾತೆಯವರು ಸಹ ಆನಂದ–ಅಚ್ಚರಿ ಪಡುವುದನ್ನು ನಾವು ಕೆಲವು ಘಟನೆಗಳಲ್ಲಿ ಕಾಣುತ್ತೇವೆ.

**ಬೃಂದಾವನ ಯಾತ್ರೆ :** ಶ್ರೀಮಾತೆಯವರು ಮೊಟ್ಟಮೊದಲ ರೈಲಿನಲ್ಲಿ ತೀರ್ಥಯಾತ್ರೆಗೆ ಹೋದದ್ದು ಬೃಂದಾವನಕ್ಕೆ. ಶ್ರೀರಾಮ ಕೃಷ್ಣ ಮಹಾಸಮಾಧಿಯ ೧೫ ದಿನಗಳ ನಂತರ ಆಗಸ್ಟ್ ೩೦, ೧೮೮೬ ರಂದು ಅವರು ಗೋಲಾಪ್ ಮಾ, ಲಕ್ಷ್ಮೀ, ನಿಕುಂಜಾ ದೇವಿ (ಮಾಸ್ಟರ್ ಮಹಾಶಯನ ಪತ್ನಿ), ಯೋಗೀಂದ್ರ, ಕಾಳೀ ಪ್ರಸನ್ನ ಮತ್ತು ಲಾಟು ಇವರೊಡನೆ ರೈಲಿನಲ್ಲಿ ವಾರಾಣಸಿ –ಬೃಂದಾವನ ಮೊದಲಾದ ಉತ್ತರ ಭಾರತದ ಪ್ರಮುಖ ಕ್ಷೇತ್ರ ಗಳಿಗೆ ಯಾತ್ರೆ ಹೊರಟರು. ವಾರಾಣಸಿಗೆ ಹೋಗುವ ಮೊದಲು ಅವರು ಶ್ರೀರಾಮಕೃಷ್ಣರಂತೆಯೇ ದೇವಘರದ ಶ್ರೀವೈದ್ಯನಾಥ ಶಿವನ ದರ್ಶನ ಮಾಡಿದರು. ವಾರಾಣಸಿಯಲ್ಲಿ ವಿಶ್ವನಾಥ– ವಿಶಾ ಲಾಕ್ಷಿ ಮುಂತಾದ ದೇವಾಲಯಗಳ ದರ್ಶನ ಮಾಡಿರುವುದಲ್ಲದೆ ಹೆಸರಾಂತ ಸಾಧು ಸ್ವಾಮಿ ಭಾಸ್ಕರಾನಂದರನ್ನು ಸಹ ಭೇಟಿ ಮಾಡಿ ದರು. ವಾರಾಣಸಿಯಿಂದ ಅವರು ಬೃಂದಾವನಕ್ಕೆ ಹೊರಟರು. ದಾರಿಯಲ್ಲಿ ಅವರು ಶ್ರೀರಾಮನ ಲೀಲಾಕ್ಷೇತ್ರವಾದ ಅಯೋಧ್ಯೆ ಯಲ್ಲಿ ಇಳಿದು ಅಲ್ಲಿ ವಿವಿಧ ಪವಿತ್ರ ಸ್ಥಳಗಳನ್ನು ಸಂದರ್ಶಿಸಿ ಬಳಿಕ ರೈಲಿನಲ್ಲಿ ಪ್ರಯಾಣ ಮುಂದುವರಿಸಿದರು. ಈ ಪ್ರಯಾಣದ ಸಂದರ್ಭದಲ್ಲಿ ಶ್ರೀಮಾತೆಯವರಿಗೆ ಶ್ರೀರಾಮಕೃಷ್ಣರ ದಿವ್ಯದರ್ಶನ ವಾಗುತ್ತದೆ. ಆ ಘಟನೆಯ ವಿವರ ಹೀಗಿದೆ:

ಶ್ರೀರಾಮಕೃಷ್ಣರು ಸಾಧನೆ ಮಾಡುವ ಕಾಲದಲ್ಲಿ ಒಮ್ಮೆ ಅವರ ದೇಹದಲ್ಲಿ ತುಂಬಾ ಉರಿ ಉಂಟಾಗುತ್ತದೆ. ಏನು ಮಾಡಿದರೂ ಆ ಉರಿ ಕಡಿಮೆಯಾಗದಿರಲು ಅವರು ತಮ್ಮ ಇಷ್ಟದೇವತೆಯಾದ ಭವತಾರಿಣಿ ಮಾತೆಯ ಹೆಸರಿನ ಒಂದು ತಾಯಿತವನ್ನು ಕಟ್ಟಿ ಕೊಳ್ಳುತ್ತಾರೆ. ಇದರಿಂದ ಉರಿ ಕಡಿಮೆಯಾಗಿತ್ತು. ನಂತರ ಅವರು ಅದನ್ನು ತಮ್ಮ ಅಣ್ಣನ ಮಗಳು ಲಕ್ಷ್ಮೀದೇವಿಗೆ ಕೊಟ್ಟಿದ್ದರು. ನಂತರ ಶ್ರೀಮಾತೆಯವರು ಅದನ್ನು ಧರಿಸಲು ಇಚ್ಛಿಸಿದ್ದರಿಂದ ಲಕ್ಷ್ಮೀ ದೇವಿಯು ಅದನ್ನು ಅವರಿಗೆ ನೀಡಿದ್ದಳು. ಶ್ರೀಮಾತೆಯವರು ಅದನ್ನು ತಮ್ಮ ತೋಳಿನಲ್ಲಿ ಸದಾ ಧರಿಸಿ ತುಂಬಾ ಜೋಪಾನವಾಗಿ ನೋಡಿಕೊಳ್ಳುತ್ತಿದ್ದರು ಮತ್ತು ಅದನ್ನು ಪೂಜಿಸುತ್ತಿದ್ದರು. ಈಗ ಬೃಂದಾವನಕ್ಕೆ ಪ್ರಯಾಣ ಮಾಡುವಾಗ ಅವರು ತಾಯಿತವನ್ನು ಧರಿಸಿದ ತೋಳನ್ನು ರೈಲುಗಾಡಿಯ ಕಿಟಕಿಯ ಬಳಿ ಮೇಲ್ಭಾಗ ದಲ್ಲಿಟ್ಟು ಮಲಗಿಕೊಂಡಿದ್ದಾರೆ. ಅವರ ತೋಳಿನಲ್ಲಿದ್ದ ತಾಯಿತವು ಕಿಟಕಿಯ ಹೊರಭಾಗಕ್ಕೆ ಚಾಚಿಕೊಂಡಿತ್ತು. ಆಗ ಹಠಾತ್ತಾಗಿ ಶ್ರೀ ರಾಮಕೃಷ್ಣರು ಅವರಿಗೆ ಕಾಣಿಸಿಕೊಂಡು ಕಿಟಕಿಯ ಒಳಗೆ ಇಣುಕಿ ನೋಡುತ್ತಾ ಶ್ರೀಮಾತೆಯವರಿಗೆ ಹೀಗೆ ಹೇಳುತ್ತಾರೆ, ''ನೋಡು, ಆ ತಾಯಿತ ನಿನ್ನೊಡನೆಯೇ ಇದೆ. ಅದು ಕಳೆದು ಹೋಗದ ಹಾಗೆ ಜೋಪಾನವಾಗಿ ನೋಡಿಕೋ!'' ಎಂದು. ಶ್ರೀಮಾತೆಯವರು ತಕ್ಷಣವೇ ಅದನ್ನು ತೆಗೆದು ಯಾವ ಪೆಟ್ಟಿಗೆಯಲ್ಲಿ ಅವರು ಪ್ರತಿದಿನ ಪೂಜಿಸುತ್ತಿದ್ದ ಶ್ರೀರಾಮಕೃಷ್ಣರ ಭಾವಚಿತ್ರವನ್ನು ಇಡುತ್ತಿದ್ದರೊ ಅದರಲ್ಲಿ ಇಟ್ಟರು. ಈ ಘಟನೆಯ ನಂತರ ಅವರು ಆ ತಾಯಿತ ವನ್ನು ಪುನಃ ಧರಿಸಲಿಲ್ಲ. ಆ ಪ್ರಯಾಣ ಸುಗಮವಾಗಿ ಸಾಗಿತು. ಎಲ್ಲರೂ ಬೃಂದಾವನವನ್ನು ತಲುಪಿದರು.

ಬೃಂದಾವನದ ರೈಲ್ವೇ ನಿಲ್ದಾಣದಲ್ಲಿ ನಡೆದ ಒಂದು ಸ್ವಾರಸ್ಯದ ಘಟನೆ ಇಲ್ಲಿ ಉಲ್ಲೇಖನೀಯವಾದುದು. ಅದನ್ನು ಶ್ರೀಮಾತೆ ಯವರ ಮಾತಿನಲ್ಲಿಯೇ ಕೇಳೋಣ: ''ಬೃಂದಾವನದಲ್ಲಿ ರೈಲಿ ನಿಂದ ಇಳಿಯುತ್ತಿದ್ದೆ. ಹುಡುಗರೆಲ್ಲರೂ ಮೊದಲು ಇಳಿದರು. ಗೋಲಾಪ್ ಗಾಡಿಯಿಂದ ಸಾಮಾನುಗಳನ್ನು ಇಳಿಸಿಕೊಡು ತ್ತಿದ್ದಾಳೆ. ಲಾಟುವಿನ ಹುಕ್ಕಾ ಕೊಳವೆಗಳು ಅಲ್ಲಿಯೇ ಬಿದ್ದಿದ್ದವು. ನನ್ನ ಕೈಯಲ್ಲಿ ಅದನ್ನು ಕೊಟ್ಟಳು. ಲಕ್ಷ್ಮೀದೇವಿ ಅದನ್ನು ನೋಡಿ ಹೇಳಿದಳು, 'ಇಗೋ, ನೀನು ಹುಕ್ಕಾ ಕೊಳವೆ ಹಿಡಿದುಕೊಂಡಿ ದ್ದಾಯಿತು' ಎಂದು. ನಾನು ಸಹ, 'ಠಾಕೂರ್, ಠಾಕೂರ್, ಇದೋ ನಾನು ಹುಕ್ಕಾ–ಕೊಳವೆ ಹಿಡಿದುಕೊಂಡಿದ್ದು ಆಯಿತು' ಎನ್ನುತ್ತಾ ಧೊಪ್ ಎಂದು ನೆಲದ ಮೇಲೆ ಅದನ್ನು ಬಿಸಾಡಿಬಿಟ್ಟೆ''. ಈ ಘಟನೆಯನ್ನು ಕೇಳಿದಾಗ ಏನೀ ಹುಕ್ಕಾ ಕೊಳವೆ? ಶ್ರೀಮಾತೆ ಯವರು ಅದನ್ನು ಏಕೆ ಹಿಡಿದುಕೊಳ್ಳಬೇಕಾಗಿತ್ತು? ಎನ್ನುವ ಪ್ರಶ್ನೆ ಉದ್ಭವಿಸುವುದು ಸಹಜ. ಅದಕ್ಕಾಗಿ ಸ್ವಲ್ಪ ವಿವರಣೆ ಆವಶ್ಯಕ ವಾಗಿದೆ.

ಒಮ್ಮೆ ಶ್ರೀರಾಮಕೃಷ್ಣರು ತಾವು ಪುನಃ ಎಂಟು ಬಾರಿ ಅವ ತರಿಸಿ ಬರುವುದಾಗಿ ಹೇಳಿದ್ದರು. ಅದರಲ್ಲಿ ಒಂದು ಬಾರಿ ಅವರು ಸಂನ್ಯಾಸಿ ವೇಷದಲ್ಲಿ ಬರುವುದಾಗಿದೆ. ಬಾವುಲ್ ವೇಷದಲ್ಲಿ (ಒಂದು ರೀತಿಯ ಸನ್ಯಾಸಿ ಪಂಗಡ) ಅವರು ಬರುವುದಾಗಿ ಹೇಳುತ್ತಾ ಅದರ ವಿವರಣೆಯನ್ನು ನೀಡುತ್ತಾರೆ. ಮೈಮೇಲೆ ಆಲ ಖಲ್ಲಾ (ಸಂನ್ಯಾಸಿಯ ನಿಲುವಂಗಿ), ತಲೆಯಲ್ಲಿ ಜೂಟಾಜೂಟ, ಉದ್ದನೆಯ ದಾಡಿ, ಅವರೇ ಹೇಳುವಂತೆ ವರ್ಧಮಾನ ರಸ್ತೆಯ ಮೂಲಕ ಹಳ್ಳಿಗೆ ಹೋಗುವೆ... ಒಡೆದು ಹೋದ ಕಲ್ಲಿನ ಬಟ್ಟಲು ಕೈಯಲ್ಲಿ, ಹೆಗಲಲ್ಲಿ ತೂಗಾಡುವ ಚೀಲ. ದಾರಿ ಹಿಡಿದು ಹೋಗು ತ್ತಲೇ ಇರುವೆ, ತಿನ್ನಲು ನೀಡಿದರೆ ತಿನ್ನುತ್ತಲೇ ಇರುವೆ. ಕಾಲ– ದಿಕ್ಕು ಇದಾವುದರ ಪರಿವೇ ಇರುವುದಿಲ್ಲ. ಈ ವಿವರಣೆಯನ್ನು ಕೇಳಿ ಶ್ರೀಮಾತೆಯವರು ''ಅರೇ ಇದೇನಿದು ನಿಮಗೆ, ಇಂತಹ ಇಚ್ಛೆ?'' ಎನ್ನುತ್ತಾರೆ. ಶ್ರೀರಾಮಕೃಷ್ಣರು ನಗುತ್ತಾ ಹೇಳುತ್ತಾರೆ. ''ಹೌದು ನೀನೂ ಸಹ ಬರಬೇಕಾಗುತ್ತದೆ. ನಿನ್ನ ಕೈಯಲ್ಲಿ ಹುಕ್ಕಾ– ಕೊಳವೆ ಇರುತ್ತದೆ'' ಎಂದು. ಆದರೆ ಶ್ರೀಮಾತೆಯವರಿಗೆ ಪುನಃ ಬರುವುದು ಇಷ್ಟವಿರುವುದಿಲ್ಲ. ಆದುದರಿಂದಲೇ ಅವರು ಮೇಲಿನ ಸಂದರ್ಭದಲ್ಲಿ ಹಾಗೆ ಹೇಳುತ್ತಾರೆ.

ಬೃಂದಾವನದ ನಂತರ ಶ್ರೀಮಾತೆಯವರು ಗೋಲಾಪ್‌ಮಾ, ಯೋಗೀನ್‌ಮಾ, ಲಕ್ಷ್ಮೀದೇವಿ, ಯೋಗೀಂದ್ರ ಇವರುಗಳೊಂ ದಿಗೆ ಹರಿದ್ವಾರ ಯಾತ್ರೆ ಮಾಡಿದರು. ಈ ರೈಲು ಪ್ರಯಾಣದಲ್ಲಿ ಯೋಗೀಂದ್ರನಿಗೆ ಇದ್ದಕ್ಕಿದ್ದಂತೆ ತೀವ್ರವಾದ ಜ್ವರ ಬಂದಿತು. ಶ್ರೀಮಾತೆ ಮತ್ತು ಇತರರು ಅವನಿಗೆ ಆರೈಕೆ ಮಾಡುತ್ತಿದ್ದರು.

ಈ ಯಾತ್ರೆಯ ಕೊನೆಯಲ್ಲಿದಾಗಿ ಅವರು ತ್ರಿವೇಣಿ ಸಂಗ ಮಕ್ಕೆ (ಪ್ರಯಾಗಕ್ಕೆ) ಹೋದರು. ಪ್ರಯಾಗದ ನಂತರ ಅವರೆ ಲ್ಲರೂ ಸಹ ಪುನಃ ಕೊಲ್ಕತ್ತಾಗೆ ಮರಳಿದರು.

**ಪುರೀಯಾತ್ರೆ:** ನವೆಂಬರ್ ೧೮೮೮ರಿಂದ ಜನವರಿ ೧೮೮೯ರ ವರೆಗೆ ಶ್ರೀಮಾತೆಯವರು ಜಗನ್ನಾಥ ಪುರಿಯಾತ್ರೆ ಮಾಡಿದರು. ಆದರೆ, ಆಗ ರೈಲು ಮಾರ್ಗವು ಪುರಿಯವರೆಗೆ ಆಗಿರಲಿಲ್ಲ. ಆದ್ದರಿಂದ ಅವರು ಉಗಿದೋಣಿಯಲ್ಲಿ (ಸ್ಟೀಮರ್) ಇತರ ಸಂಗಡಿಗರೊಂದಿಗೆ ಹೋಗಿದ್ದರು.

**ಗಯಾ ಯಾತ್ರೆ:** ಶ್ರೀಮಾತೆಯವರು ೨೯ನೆಯ ಮಾರ್ಚ್ ೧೮೯೦ರಂದು ವಯೋವೃದ್ಧರಾದ ಸ್ವಾಮಿ ಅದ್ವೈತಾನಂದರೊಂದಿಗೆ ಶ್ರೀರಾಮಕೃಷ್ಣರ ಜನನಿ ಚಂದ್ರಮಣಿದೇವಿಯವರಿಗೆ ಪಿಂಡದಾನ ಮಾಡಲು ಹೊರಟರು. ಶ್ರೀರಾಮಕೃಷ್ಣರು ಗಯಾ ಧಾಮಕ್ಕೆ ಹೋಗುವಂತೆ ಇರಲಿಲ್ಲ. ಕಾರಣವನ್ನು ಅವರೇ ಹೇಳಿರುವಂತೆ, ಗಯಾ ಕ್ಷೇತ್ರದ ಗದಾಧರನ (ವಿಷ್ಣುವಿನ) ಅನುಗ್ರಹದಿಂದ ಜನಿಸಿದ ಅವರು ಅಲ್ಲಿಗೆ ಹೋದರೆ ವಿಷ್ಣುವಿನಲ್ಲಿ ಪುನಃ ಲೀನವಾಗಿಬಿಡುವ ಸಂಭವವಿತ್ತು ಮತ್ತು ಶ್ರೀರಾಮಕೃಷ್ಣರು ಸಂನ್ಯಾಸ ಸ್ವೀಕರಿಸಿದ್ದರಿಂದ ಪಿಂಡದಾನ ನೀಡುವಂತಿರಲಿಲ್ಲ. ಈ ಎರಡು ಕಾರಣಗಳಿಂದ ಅವರು ಶ್ರೀಮಾತೆಯವರಿಗೆ ಈ ಕಾರ್ಯವನ್ನು ನಿರ್ವಹಿಸಲು ಆದೇಶಿಸಿದ್ದರು. ಶ್ರೀಮಾತೆಯವರು ಹಾಗೆಯೇ ಮಾಡಿ ಚಂದ್ರಮಣಿದೇವಿಯ ಆತ್ಮಶಾಂತಿಗಾಗಿ ವಿಷ್ಣುವಿನ ಪಾದಪದ್ಮದಲ್ಲಿ ಪ್ರಾರ್ಥನೆ ಮಾಡಿದರು. ಈ ಸಂದರ್ಭದಲ್ಲಿ ಅವರು ದಾರಿಯಲ್ಲಿ ವೈದ್ಯನಾಥ ಕ್ಷೇತ್ರ ಮತ್ತು ಬುದ್ಧಗಯೆಗಳನ್ನು ದರ್ಶಿಸಿದರು. ೨ನೆಯ ಏಪ್ರಿಲ್ ಪುನಃ ಕೊಲ್ಕತ್ತಾಗೆ ಮರಳಿ ಬಂದರು. ಈ ಯಾತ್ರೆಯನ್ನು ರೈಲಿನಲ್ಲಿಯೇ ಮಾಡಿರುವ ಸಂಭವವಿದೆ.

**ಬಿಹಾರದ ಕೈಲ್ವರ್ ಯಾತ್ರೆ:** ಶ್ರೀಮಾತೆಯವರು ೧೮೯೪ರ ಮೊದಲ ಭಾಗದಲ್ಲಿ ಬಲರಾಮ ಬಾಬುವಿನ ಪತ್ನಿ ಕೃಷ್ಣಭಾವಿನಿ ಜೊತೆ ಬಿಹಾರ ರಾಜ್ಯದ ಕೈಲ್ವರ್‌ಗೆ ರೈಲಿನಲ್ಲಿಯೇ ಹೋಗಿ ಅಲ್ಲಿ ಎರಡು ತಿಂಗಳಿದ್ದರು. ಕೈಲ್ವರಿನ ವನ್ಯಪ್ರದೇಶದಲ್ಲಿ ಶ್ರೀಮಾತೆಯವರು ಜಿಂಕೆ, ನರಿ ಮುಂತಾದ ವನ್ಯಪ್ರಾಣಿಗಳನ್ನು ನೋಡಿ ಆನಂದಿಸಿದ್ದರು.

**ದ್ವಿತೀಯ ಬೃಂದಾವನ - ವಾರಾಣಸಿ ಯಾತ್ರೆ:** ಶ್ರೀಮಾತೆಯವರು ೧೮೯೫ರ ಆರಂಭದಲ್ಲಿ ಎರಡನೆಯ ಬಾರಿಗೆ ಬೃಂದಾವನ-ವಾರಾಣಸಿ ಯಾತ್ರೆಯನ್ನು ತಮ್ಮ ತಾಯಿ, ಇಬ್ಬರು ಸೋದರರು, ಸ್ವಾಮಿ ಯೋಗಾನಂದರು, ಗೋಲಾಪ್-ಮಾ ಮತ್ತು ಯೋಗಿನ್‌ಮಾ ಜೊತೆ ಮಾಡಿದರು. ಸುಮಾರು ಎರಡು ತಿಂಗಳ ಯಾತ್ರೆ ಇದಾಗಿತ್ತು.

**ದ್ವಿತೀಯ ಪುರಿ ಜಗನ್ನಾಥ ಕ್ಷೇತ್ರದ ಯಾತ್ರೆ:** ಶ್ರೀಮಾತೆಯವರು ಪುನಃ ಎರಡನೆಯ ಬಾರಿಗೆ ಪುರಿ ಜಗನ್ನಾಥ ಕ್ಷೇತ್ರಕ್ಕೆ ಯಾತ್ರೆ ಹೊರಟರು. ೧೯೦೪ನೆಯ ನವೆಂಬರ್ ತಿಂಗಳಿನಲ್ಲಿ ತಮ್ಮ ಸ್ತ್ರೀ ಸಂಗಡಿಗರು, ಸ್ವಾಮಿ ಪ್ರೇಮಾನಂದರು ಮತ್ತು ಇತರ ಪುರುಷ ಭಕ್ತರೊಡನೆ ಈ ಬಾರಿ ರೈಲುಗಾಡಿಯಲ್ಲಿ ಪುರಿಗೆ ಯಾತ್ರೆ ಹೊರಟರು. ಈ ವೇಳೆಗಾಗಲೇ ಬಂಗಾಳ-ನಾಗಪುರ ರೈಲ್ವೇ ಮಾರ್ಗ ಪುರಿ ಕ್ಷೇತ್ರದವರೆಗೂ ನಿರ್ಮಾಣವಾಗಿತ್ತು. ಈ ರೈಲಿನಲ್ಲಿ ಒಂದು ದ್ವಿತೀಯ ದರ್ಜೆಯ ನಿಗದಿತ ಬೋಗಿಯಲ್ಲಿ ಶ್ರೀಮಾತೆಯವರು, ಲಕ್ಷ್ಮೀದೇವಿ, ಗೋಲಾಪ್ ಮಾ, ರಾಧಿ, ಅವಳ ತಾಯಿ (ಹುಚ್ಚತ್ತೆ) ಕುಸುಮಕುಮಾರಿ, ನಿಕುಂಜಾದೇವಿ, ಚುನಿಲಾಲ್ ಎಂಬ ಭಕ್ತನ ಹೆಂಡತಿ ಮತ್ತು ನೀಲಮಾಧವ ಇದ್ದರು. ಮತ್ತೊಂದು ಮಧ್ಯಮ ದರ್ಜೆಯ ಬೋಗಿಯಲ್ಲಿ ಸ್ವಾಮಿ ಪ್ರೇಮಾನಂದರು ಮತ್ತು ಮೂರು ಜನ ಭಕ್ತರು ಇದ್ದರು. ಒಂದು ರಾತ್ರಿಯಿಡೀ ರೈಲು ಪ್ರಯಾಣ ಮಾಡಿ ನಂತರದ ದಿನ ಮುಂಜಾನೆಯಲ್ಲಿ ಅವರು ಪುರಿ ಕ್ಷೇತ್ರವನ್ನು ತಲುಪಿದರು. ಅಲ್ಲಿ ಶ್ರೀಮಾತೆ ಮತ್ತು ಉಳಿದ ಭಕ್ತೆಯರು ಬಲರಾಮ ಬಾಬುವಿನ ಅತಿಥಿಗೃಹವಾದ ಕ್ಷೇತ್ರವಾಸೀ ಮಠದಲ್ಲಿ ಇಳಿದುಕೊಂಡರು. ಸ್ವಾಮಿ ಪ್ರೇಮಾನಂದರು ಮತ್ತು ಉಳಿದ ಭಕ್ತರು ಸಮುದ್ರ ತೀರದಲ್ಲಿದ್ದ ಬಲರಾಮ ಬಾಬುವಿನ ಇನ್ನೊಂದು ನಿವಾಸ ಶಶಿನಿಕೇತನದಲ್ಲಿ ಉಳಿದುಕೊಂಡರು. ಶ್ರೀಮಾತೆಯವರೊಡನೆ ಎಲ್ಲರೂ ಸಹ ಶ್ರೀ ಜಗನ್ನಾಥ ಸ್ವಾಮಿಯ ದರ್ಶನ ಮಾಡಿ ಆನಂದಿತರಾದರು. ಸುಮಾರು ಮೂರು ತಿಂಗಳು ಅಲ್ಲಿದ್ದು ೧೯೦೫ನೆಯ ಜನವರಿಯಲ್ಲಿ ಕೊಲ್ಕತ್ತಾಗೆ ಶ್ರೀಮಾತೆಯವರು ಮರಳಿದರು.

**ಒರಿಸ್ಸಾದ ಕೋಥಾರ್ ಯಾತ್ರೆ:** ಶ್ರೀಮಾತೆಯವರ ತೀರ್ಥಯಾತ್ರೆಗಳಲ್ಲಿ ಅತಿದೂರದ ಯಾತ್ರೆ ಎಂದರೆ ರಾಮೇಶ್ವರ ಯಾತ್ರೆ ದಕ್ಷಿಣಭಾರತದ ತೀರ್ಥಯಾತ್ರೆಗೆ ಹೋಗಲು ಅವರು ಅನೇಕ ದಿನಗಳಿಂದ ಯೋಚಿಸುತ್ತಿದ್ದರು. ಅವರ ಆಪ್ತ ಭಕ್ತೆಯರಲ್ಲಿ ಒಬ್ಬರಾದ ಬಲರಾಮಬಾಬುವಿನ ಪತ್ನಿ ಕೃಷ್ಣಭಾವಿನಿಗೆ ದಕ್ಷಿಣಕ್ಕೆ ಯಾತ್ರೆ ಹೋಗುವ ಇಚ್ಛೆಯಿತ್ತು. ಈ ಮೊದಲು ಅವಳು ಶ್ರೀಮಾತೆಯವರನ್ನು ಒರಿಸ್ಸಾದ ಕೋಥಾರ್ ಎಂಬ ಸ್ಥಳದಲ್ಲಿದ್ದ ತಮ್ಮ ತೋಟದ ಮನೆಗೆ ಕರೆದುಕೊಂಡು ಹೋಗುವ ತನ್ನ ಇಚ್ಛೆಯನ್ನು ಅವರಿಗೆ ತಿಳಿಸಿದಳು. ಶ್ರೀಮಾತೆಯವರು ಸಮ್ಮತಿ ನೀಡಿದರು. ಅದರಂತೆ ಡಿಸೆಂಬರ್ ೧೯೦೦ರಲ್ಲಿ ಶ್ರೀಮಾತೆಯವರು, ಕೃಷ್ಣಭಾವಿನಿ ಮತ್ತು ಅವಳ ಸೋದರತ್ತೆ, ಗೋಲಾಪ್‌ಮಾ, ಸುರಬಾಲೆ, ರಾಧಾರಾಣಿ, ಸ್ವಾಮಿ ಆತ್ಮಾನಂದ, ಸ್ವಾಮಿ ಧೀರಾನಂದ, ರಾಮಕೃಷ್ಣ ಬೋಸ್ ಹಾಗೂ ಇತರ ಕೆಲವು ಭಕ್ತರು ರೈಲಿನಲ್ಲಿ ಕೋಥಾರ್‌ಗೆ ಹೊರಡಲು ಸಿದ್ಧರಾದರು. ಶ್ರೀಮಾತೆಯವರು ಮತ್ತು ಅವರ ಸ್ತ್ರೀ ಸಂಗಾತಿಗಳು ರೈಲುಗಾಡಿಯ ಎರಡನೆಯ ದರ್ಜೆಯ ಬೋಗಿಯಲ್ಲಿ ಉಳಿದವರು ಮಧ್ಯಮ ದರ್ಜೆಯ ಬೋಗಿಯಲ್ಲಿ ಪ್ರಯಾಣ ಮಾಡಿದರು. ಭದ್ರಕ್ ಎಂಬ ರೈಲು ನಿಲ್ದಾಣದಲ್ಲಿ ಸ್ವಾಮಿ ಪ್ರೇಮಾನಂದರ ಸೋದರ ತುಲಸೀರಾಮ ಅವರೆಲ್ಲರನ್ನು ಕರೆದುಕೊಂಡು ಹೋಗಲು ಗಾಡಿ-ಪಲ್ಲಕ್ಕಿಗಳ ಸಮೇತ ಬಂದು ಕಾದುಕೊಂಡಿದ್ದನು. ಅಲ್ಲಿಂದ ಕೋಥಾರ್‌ಗೆ ಕರೆದುಕೊಂಡು ಬರಲಾಯಿತು. ಕೆಲವು ದಿನಗಳ ನಂತರ ಸುರಬಾಲೆಯ ಹುಚ್ಚು ಅಧಿಕವಾಗಲು ಅವಳನ್ನು ಜಯರಾಮಬಾಟಿಗೆ ಮರಳಿ ಕಳುಹಿಸಲಾಯಿತು. ಸುಮಾರು ಎರಡು ತಿಂಗಳು ಕಳೆದ ನಂತರ ಶ್ರೀಮಾತೆಯವರು ಕೋಥಾರ್‌ನಿಂದ ರಾಮೇಶ್ವರ ಯಾತ್ರೆ ಮಾಡುವ ಇಚ್ಛೆ ವ್ಯಕ್ತಪಡಿಸಿದರು.

**ರಾಮೇಶ್ವರ ಯಾತ್ರೆ:** ಶ್ರೀಮಾತೆಯವರ ಇಚ್ಛೆಯನ್ನು ಅರಿತ ಸ್ವಾಮಿ ಶಾರದಾನಂದರು ಯಾತ್ರೆಯ ವ್ಯವಸ್ಥೆಯನ್ನು ಮಾಡಲಾರಂ

ಭಿಸಿದರು. ಪತ್ರದ ಮೂಲಕ ಸ್ವಾಮಿ ರಾಮಕೃಷ್ಣಾನಂದರೊಡನೆಯೂ ಸಹ ಸಮಾಲೋಚನೆ ನಡೆಸಿ ಫೆಬ್ರವರಿ ತಿಂಗಳ ಮಧ್ಯದಲ್ಲಿ ಯಾತ್ರೆ ಹೊರಡುವುದೆಂದು ನಿಶ್ಚಯ ಮಾಡಲಾಯಿತು. ಬಹು ದೂರದ ಈ ಯಾತ್ರೆಯಲ್ಲಿ ಯಾತ್ರಿಕರ ತಂಡವೂ ಸಹ ಸಾಕಷ್ಟು ದೊಡ್ಡದಾಗಿತ್ತು. ಜಯರಾಮಬಾಟಿಯಿಂದ ಸ್ವಲ್ಪ ಸುಧಾರಿಸಿಕೊಂಡ ಸುರಬಾಲಾಳನ್ನು ಕರೆಸಿಕೊಳ್ಳಲಾಯಿತು ಅವಳ ಜೊತೆಗೆ ಕೊಯಲಪಾರಾದ ಕೇದಾರನಾಥ ದತ್ತ ಮಹಾಶಯನ ತಾಯಿಯೂ ಸಹ ಜೊತೆಗೆ ಬಂದಳು. ಹೀಗೆ ಶ್ರೀಮಾತೆಯವರ ಜೊತೆಗೆ ಕೃಷ್ಣಲಾಲ ಮಹಾರಾಜ್, ಶುಕುಲ್ ಮಹಾರಾಜ್, ಗೋಲಾಪ್ ಮಾ, ರಾಮಬಾಬುವಿನ ತಾಯಿ ಮತ್ತು ಚಿಕ್ಕಮ್ಮ, ರಾಧು ಮತ್ತಿತರರು ಹೊರಡಲು ಸಿದ್ಧರಾದರು. ಮದ್ರಾಸ್ ಮೈಲ್ ರೈಲಿನಲ್ಲಿ ಎಲ್ಲರೂ ಸಹ ೧೯೧೧ರ ಫೆಬ್ರವರಿ ತಿಂಗಳಿನ ಮಧ್ಯದಲ್ಲಿ ಮದ್ರಾಸ್‌ಗೆ ಹೊರಟರು. ರಾಮಕೃಷ್ಣ ಬೋಸ್ ಖುರ್ದಾ ರಸ್ತೆಯ ಸ್ಟೇಷನ್‌ವರೆಗೆ ಬಂದು ಬೀಳ್ಕೊಟ್ಟನು.

ಈ ರೈಲು ಪ್ರಯಾಣವನ್ನು ಶ್ರೀಮಾತೆಯವರು ತುಂಬಾ ಆನಂದಿಸಿದರು. ರೈಲು ಖುರ್ದಾ ಸ್ಟೇಷನ್ ಬಿಟ್ಟು ಸ್ವಲ್ಪ ದೂರ ಹೋದ ಬಳಿಕ ಚಿಲ್ಕಾ ಎಂಬ ಬೃಹತ್ ಸರೋವರದ ಮೇಲಿಂದ ನೈಋತ್ಯದ ಕಡೆಗೆ ಮುಂದುವರಿಯಿತು ಆ ಸರೋವರದ ಸುಂದರ ಪ್ರಾಕೃತಿಕ ಸೌಂದರ್ಯವನ್ನು ಶ್ರೀಮಾತೆಯವರು ಸವಿಯತೊಡಗಿದರು. ಸರೋವರದಲ್ಲಿನ ಅಲೆಗಳ ಚೆಲ್ಲಾಟ, ಬೆಳ್ಳಕ್ಕಿ, ನೀಲಕಂಠ ಪಕ್ಷಿ ಮುಂತಾದವುಗಳ ದೃಶ್ಯ ಎಲ್ಲವನ್ನೂ ಸಹ ಅವರು ಮುಗ್ಧ ಮಗುವಿನಂತೆ ಅಚ್ಚರಿಯಿಂದ ನೋಡುತ್ತಿದ್ದರು. ಸೂರ್ಯೋದಯದ ಸೌಂದರ್ಯವನ್ನು ವೇಗವಾಗಿ ಸಾಗುತ್ತಿದ್ದ ರೈಲಿನ ಕಿಟಕಿಯಿಂದ ಯಾತ್ರಿಕರೆಲ್ಲರೂ ಸಹ ನೋಡಿ ಆನಂದಿಸುತ್ತಿದ್ದರು. ಬೆಳಿಗ್ಗೆ ಎಂಟು ಗಂಟೆಯ ಹೊತ್ತಿಗೆ ರೈಲು ಗಂಜಾಮ್ ಜಿಲ್ಲೆಯ ಬರ್ಹಾಂಪುರವನ್ನು ತಲುಪಿತು. ಅಲ್ಲಿ ಕೆಲ್ನರ್ ಕಂಪನಿಯ ಬಂಗಾಳೀ ಮ್ಯಾನೇಜರ್ ಎಲ್ಲರನ್ನು ತನ್ನ ಮನೆಗೆ ಕರೆದುಕೊಂಡು ಸತ್ಕರಿಸಿದರು. ಆ ದಿನ ಮಧ್ಯಾಹ್ನ ಶ್ರೀಮಾತೆಯವರ ಬಳಿಗೆ ಅಲ್ಲಿನ ಭಕ್ತರು ಭಕ್ತಿ ಪೂರ್ವಕವಾಗಿ ಬಂದು ಬಾಳೆಹಣ್ಣು ಮತ್ತು ತೆಂಗಿನ ಕಾಯಿಗಳನ್ನು ಸಮರ್ಪಿಸಿ ಅವರ ಪಾದಗಳಿಗೆ ಪ್ರಣಾಮ ಮಾಡಿದರು. ಮರುದಿನ ಮುಂಜಾನೆ ಯಾತ್ರಿಕರೆಲ್ಲರೂ ಪುನಃ ರೈಲು ಗಾಡಿಯನ್ನು ಏರಿ ಮುಂದಿನ ಪ್ರಯಾಣ ಮಾಡಿದರು. ಆ ದಿನದ ಮಧ್ಯಾಹ್ನದ ವೇಳೆಗೆ ರೈಲು ವಿಶಾಖಪಟ್ಟಣದ ಮೂಲಕ ಹಾದು ಹೋಯಿತು. ಬೆಟ್ಟದ ತಪ್ಪಲಿನಲ್ಲಿರುವ ಈ ನಗರವು ಅತ್ಯಂತ ಸುಂದರವಾಗಿತ್ತು. ಬೆಟ್ಟದ ಮೇಲೆ ಸಾಲು ಸಾಲಾಗಿ ಕಟ್ಟಿದ್ದ ಭವನಗಳನ್ನು ಕಂಡು ಶ್ರೀಮಾತೆಯವರು ಅಚ್ಚರಿ-ಆನಂದದಿಂದ 'ಆಹಾ, ಅಲ್ಲಿ ನೋಡಿ! ಅಲ್ಲಿ ನೋಡಿ!! ಸುಂದರ ಚಿತ್ರದಂತೆ ಕಾಣುತ್ತಿದೆ!!' ಎಂದು ಹೇಳಿದರು. ಮರುದಿನ ಮಧ್ಯಾಹ್ನ ರೈಲು ಮದ್ರಾಸನ್ನು ತಲುಪಿತು. ರೈಲು ನಿಲ್ದಾಣದಲ್ಲಿ ಶ್ರೀಮಾತೆಯವರಿಗೆ ಸ್ವಾಗತ ನೀಡಲು ಸ್ವಾಮಿ ರಾಮಕೃಷ್ಣಾನಂದರು ಅನೇಕ ಭಕ್ತರೊಂದಿಗೆ ಕಾದುಕೊಂಡಿದ್ದರು. ರೈಲು ನಿಲ್ದಾಣವನ್ನು ಪ್ರವೇಶಿಸುತ್ತಿದ್ದಂತೆಯೇ ಎಲ್ಲೆಡೆ ಜಯಕಾರ ಧ್ವನಿ ಮೊಳಗಿತು. ಯಾತ್ರಿಕರನ್ನು ಗೌರವ ಆದರದಿಂದ ಮೈಲಾಪುರಕ್ಕೆ ಕರೆದುಕೊಂಡು ಹೋಗಿ ಮಠದ ಎದುರುಗಡೆಯ ಎರಡು ಅಂತಸ್ತಿನ ಬಾಡಿಗೆ ಮನೆಯಲ್ಲಿ ವಸತಿಯನ್ನು ಏರ್ಪಾಡು ಮಾಡಿದ್ದರು. ಶ್ರೀಮಾತೆಯವರು ಮದ್ರಾಸಿನಲ್ಲಿ ಸುಮಾರು ಎರಡು ತಿಂಗಳ ಕಾಲ ವಾಸವಾಗಿದ್ದರು. ಅಲ್ಲಿನ ಪ್ರೇಕ್ಷಣೀಯ ಸ್ಥಳಗಳನ್ನು ಈ ಸಮಯದಲ್ಲಿ ನೋಡಿದರು. ಅನೇಕ ಭಕ್ತರಿಗೆ ಶ್ರೀಮಾತೆಯವರು ದರ್ಶನ ಮತ್ತು ಕೆಲವರಿಗೆ ದೀಕ್ಷೆಯನ್ನು ನೀಡಿದರು.

ಕೆಲವು ದಿನಗಳ ನಂತರ ಶ್ರೀರಾಮಕೃಷ್ಣರ ಅಣ್ಣನ ಮಗ ರಾಮಲಾಲನು ಸಹ ರಾಮೇಶ್ವರ ಯಾತ್ರೆಯ ಉದ್ದೇಶದಿಂದ ಮದ್ರಾಸಿಗೆ ಬಂದು ಶ್ರೀಮಾತೆಯವರ ಯಾತ್ರಾ ತಂಡದವರೊಂದಿಗೆ ಸೇರಿಕೊಂಡನು. ಅವರೆಲ್ಲರೂ ಈಗ ರಾಮೇಶ್ವರಕ್ಕೆ ಹೊರಟರು. ಮೊದಲು ಮದುರೈ ಮೀನಾಕ್ಷಿದೇವಿಯ ದರ್ಶನ ಮಾಡುವುದಾಗಿ ನಿಶ್ಚಯವಾಯಿತು. ಮಧುರೈಗೆ ಹೋಗುವ ರಾತ್ರಿಯ ರೈಲು ಗಾಡಿಯಲ್ಲಿ ಎಲ್ಲರನ್ನೂ ಕರೆದುಕೊಂಡು ಸ್ವಯಂ ಸ್ವಾಮಿ ರಾಮಕೃಷ್ಣಾನಂದರು ದ್ವಿತೀಯ ದರ್ಜೆಯ ಬೋಗಿಯಲ್ಲಿ ಹೊರಟು ಮರುದಿನ ಮುಂಜಾನೆ ಮದುರೈ ತಲುಪಿದಾಗ ಅಲ್ಲಿನ ಪುರಸಭೆಯ ಅಧ್ಯಕ್ಷರು ಅವರೆಲ್ಲರನ್ನೂ ತಮ್ಮ ಮನೆಗೆ ಕರೆದುಕೊಂಡು ಹೋಗಿ ಸತ್ಕರಿಸಿದರು. ಶ್ರೀಮಾತೆಯವರು ಮತ್ತು ಅವರ ಸಂಗಡಿಗರು ಅಲ್ಲಿನ ಅಧಿಷ್ಠಾನ ದೇವತೆ ಸುಂದರೇಶ್ವರ ಸ್ವಾಮಿ (ಶಿವ) ಮತ್ತು ಮೀನಾಕ್ಷಿ ದೇವಿಯವರ ದರ್ಶನ ಮಾಡಿದರು. ದೇವಾಲಯದ ಬಳಿಯಲ್ಲಿನ ಶಿವಗಂಗಾ ಜಲಾಶಯ, ಸಹಸ್ರಸ್ತಂಭ ಮಂಟಪ, ಅರಮನೆ ಮುಂತಾದವುಗಳನ್ನು ನೋಡಿ ಶ್ರೀಮಾತೆಯವರು ಶ್ರೀರಾಮಕೃಷ್ಣರ ಲೀಲೆ ಅದ್ಭುತ ಎಂದು ಆನಂದಿಸಿದರು.

ಮದುರೆಯಿಂದ ಮಧ್ಯಾಹ್ನದ ರೈಲುಗಾಡಿಯಲ್ಲಿ ಹೊರಟು ಅವರೆಲ್ಲರೂ ಮಂಡಪಮ್ ಎನ್ನುವ ಸ್ಥಾನಕ್ಕೆ ತಲುಪಿದರು. ಅಲ್ಲಿಂದ ಉಗಿದೋಣಿಯಲ್ಲಿ ಪ್ರಯಾಣಿಸಿ ಪಾಂಬನ್ ದ್ವೀಪವನ್ನು ಸೇರಿದರು ಮತ್ತು ಅಲ್ಲಿಂದ ಪುನಃ ರೈಲು ಗಾಡಿಯನ್ನು ಏರಿ ರಾಮೇಶ್ವರ ತೀರ್ಥವನ್ನು ತಲುಪಿದಾಗ ಪ್ರಾಯಶಃ ರಾತ್ರಿ ಹನ್ನೊಂದು ಗಂಟೆಯಾಗಿತ್ತು. ಪುರೋಹಿತ ಗಂಗಾರಾಮ ಪೀತಾಂಬರರು ಒಂದು ಮನೆಯಲ್ಲಿ ಅವರೆಲ್ಲರ ವಸತಿಯನ್ನು ಈ ಮೊದಲೇ ವ್ಯವಸ್ಥೆ ಮಾಡಿದ್ದರು. ರಾತ್ರಿ ಅವರೆಲ್ಲರೂ ವಾಸ್ತವ್ಯಕ್ಕೆ ಹೋದ ಮೇಲೆ ಅಲ್ಲಿಂದಲೇ ರಾಮೇಶ್ವರನಿಗೆ ನಮಸ್ಕರಿಸಿ ವಿಶ್ರಾಂತಿ ಪಡೆದರು. ಮರುದಿನ ಮುಂಜಾನೆ ಎದ್ದು ಎಲ್ಲರೂ ಸಹ ಸಮುದ್ರ ಸ್ನಾನವನ್ನು ಮಾಡಿ ರಾಮೇಶ್ವರ ದೇವಾಲಯಕ್ಕೆ ಹೊರಟರು. ಆ ಭವ್ಯ ದೇವಾಲಯವನ್ನು ನೋಡಿ ಅತೀವ ಸಂತಸಪಟ್ಟರು.

ರಾಮೇಶ್ವರದಿಂದ ಶ್ರೀಮಾತೆ ಮತ್ತು ಅವರ ಸಂಗಡಿಗರು ಮರಳಿ ಮದುರೈಗೆ ಮತ್ತು ಅಲ್ಲಿಂದ ಮದ್ರಾಸಿಗೆ ಬಂದರು. ಮದ್ರಾಸಿನಲ್ಲಿ ಕೆಲವು ದಿನಗಳು ಉಳಿದ ನಂತರ ಎಲ್ಲರೂ ಬೆಂಗಳೂರಿಗೆ ರೈಲಿನಲ್ಲಿ ಹೊರಟು ಮಾರ್ಚ್ ತಿಂಗಳ ೨೪ರಂದು ಬೆಳಿಗ್ಗೆ ಕಂಟೋನ್ಮೆಂಟ್ ರೈಲು ನಿಲ್ದಾಣಕ್ಕೆ ಬಂದು ತಲುಪಿದರು. ರೈಲು ನಿಲ್ದಾಣದಲ್ಲಿ ಸೇರಿದ್ದ ಅನೇಕ ಭಕ್ತರು ಅತ್ಯಂತ ಶ್ರದ್ಧಾ-ಭಕ್ತಿ-ಗೌರವದಿಂದ ಅವರೆಲ್ಲರನ್ನು ಬರಮಾಡಿಕೊಂಡು ಆಶ್ರಮಕ್ಕೆ ಕರೆದುಕೊಂಡು

ಹೋದರು. ಈ ಬಗ್ಗೆ ಶ್ರೀಮಾತೆಯವರು ಮುಂದೊಮ್ಮೆ ಹೀಗೆ ಹೇಳುತ್ತಾರೆ: ''ಬೆಂಗಳೂರಿನಲ್ಲಿ ನನ್ನನ್ನು ನೋಡುವುದಕ್ಕಾಗಿ ಎಷ್ಟೊಂದು ಜನ ಬಂದಿದ್ದರು! ರೈಲಿನಿಂದ ಇಳಿಯುತ್ತಲೇ ನನ್ನ ಮೇಲೆ ಹೂವಿನ ಮಳೆಗರೆದರು. ರಸ್ತೆಯುದ್ದಕ್ಕೂ ಹೂವು! ಶ್ರೀರಾಮಕೃಷ್ಣರ ಸಂದೇಶ ಎಲ್ಲೆಡೆಯೂ ಹರಡಿದೆ. ಆದ್ದರಿಂದಲೇ ಅಷ್ಟೊಂದು ಜನ ಬರುವುದು'' ಶ್ರೀಮಾತೆಯವರು ೨೪-೩-೧೯೧೧ ದಿಂದ ೨೭-೩-೧೯೧೧ ರವರೆಗೆ ಬೆಂಗಳೂರಿನಲ್ಲಿ ನೆಲೆಸಿದ್ದರು.

ಬೆಂಗಳೂರಿನಿಂದ ಅವರೆಲ್ಲರೂ ಸಹ ಪುನಃ ಮದ್ರಾಸಿಗೆ ರೈಲಿನಲ್ಲಿ ಹಿಂದಿರುಗಿದರು ಮತ್ತು ಒಂದೆರಡು ದಿನ ವಿಶ್ರಾಂತಿ ತೆಗೆದುಕೊಂಡ ನಂತರ ಪುನಃ ಕೊಲ್ಕತ್ತಾಗೆ ಪ್ರಯಾಣಿಸಿದರು. ದಾರಿಯಲ್ಲಿ ಅವರು ರಾಜಮುಂಡ್ರಿಯಲ್ಲಿ ಇಳಿದು ಅಲ್ಲಿನ ಜಿಲ್ಲಾ ನ್ಯಾಯಾಧೀಶರಾದ ಶ್ರೀಪಾರ್ಥಸಾರಥಿ ಅಯ್ಯಂಗಾರರ ಮನೆಯಲ್ಲಿ ಒಂದು ದಿನ ವಿಶ್ರಾಂತಿ ಪಡೆದರು. ಅವರೆಲ್ಲರೂ ಗೋದಾವರಿ ನದಿಯಲ್ಲಿ ಸ್ನಾನ ಮಾಡಿದರು. ನಂತರ ಅವರು ಮುಂದೆ ಪುರಿಯಲ್ಲಿ ಎಂದಿನಂತೆ ಬಲರಾಮ ಬಾಬುವಿನ ಅತಿಥಿಗೃಹದಲ್ಲಿ ೩-೪ ದಿನ ಕಳೆದು ರೈಲಿನಲ್ಲಿ ನೇರವಾಗಿ ಕೊಲ್ಕತ್ತಾವನ್ನು ತಲುಪಿದರು. ಹೀಗೆ ಶ್ರೀಮಾತೆಯವರು ತಮ್ಮ ಬಹುದಿನದ ಇಚ್ಛೆಯಾದ ರಾಮೇಶ್ವರ ಯಾತ್ರೆಯನ್ನು ಪೂರ್ಣಗೊಳಿಸಿದರು.

**ತೃತೀಯ ವಾರಾಣಸಿ ಯಾತ್ರೆ:** ೫ನೇ ನವಂಬರ್ ೧೯೧೨ರಲ್ಲಿ ಶ್ರೀಮಾತೆಯವರು ಮೂರನೆಯ ಬಾರಿ ವಾರಾಣಸಿ ಯಾತ್ರೆಗೆ ಹೊರಟರು. ಶ್ರೀಮಾತೆಯವರ ಜೊತೆ ಗೋಲಾಪ್‌ಮಾ, ಭಾನು ಅತ್ತೆ, ಕೇದಾರನಾಥನ ತಾಯಿ, ಮಾಸ್ಟರ್ ಮಹಾಶಯ, ಆತನ ಪತ್ನಿ ಹಾಗೂ ನಾದಿನಿ ಇದ್ದರು. ಎಲ್ಲರೂ ಸಹ ರೈಲು ಪ್ರಯಾಣ ಮಾಡಿ ಸುಮಾರು ಮಧ್ಯಾಹ್ನ ಒಂದು ಗಂಟೆಯ ವೇಳೆಗೆ ವಾರಾಣಸಿಯ ಶ್ರೀರಾಮಕೃಷ್ಣ ಅದ್ವೈತ ಆಶ್ರಮಕ್ಕೆ ಹೋದರು. ಅಲ್ಲಿ ಕೆಲಕಾಲ ವಿಶ್ರಾಂತಿ ತೆಗೆದುಕೊಂಡು ಆಶ್ರಮದ ಪಕ್ಕದಲ್ಲಿ ಬಾಗ್ ಬಜಾರಿನ ದತ್ತವಂಶದವನಾದ ಕಿರಣಬಾಬುವಿನ ನೂತನ ಗೃಹ ಲಕ್ಷ್ಮೀನಿವಾಸಕ್ಕೆ ಹೋದರು. ಈ ಮನೆಯ ಮೇಲಿನ ಅಂತಸ್ತಿನಲ್ಲಿ ಸುಮಾರು ಎರಡೂವರೆ ತಿಂಗಳು ಅಲ್ಲಿ ಶ್ರೀಮಾತೆಯವರು ಮತ್ತು ಅವರ ಭಕ್ತೆಯರು ಉಳಿದುಕೊಂಡರು. ಸ್ವಾಮಿ ಪ್ರಜ್ಞಾನಾನಂದರು ಹಾಗೂ ಇತರ ಭಕ್ತರು ಕೆಳಗಿನ ನೆಲ ಅಂತಸ್ತಿನಲ್ಲಿ ಉಳಿದುಕೊಂಡರು. ಇದೇ ಶ್ರೀಮಾತೆಯವರ ಕೊನೆಯ ವಾರಾಣಸಿ ಯಾತ್ರೆಯಾಗಿತ್ತು. ೧೯೧೩ರ ಜನವರಿ ೧೯ರಂದು ಶ್ರೀಮಾತೆಯವರು ವಾರಾಣಸಿಯಿಂದ ರೈಲಿನಲ್ಲಿ ಹೊರಟು ಮರುದಿನವೇ ಕೊಲ್ಕತ್ತಾಗೆ ಬಂದರು. ಕೊಲ್ಕತ್ತಾದಲ್ಲಿ ಸುಮಾರು ಒಂದು ತಿಂಗಳಿದ್ದ ಬಳಿಕ ಜಯರಾಮಬಾಟಿಗೆ ಹೋದರು. ಶ್ರೀಮಾತೆಯವರು ಸಾಮಾನ್ಯವಾಗಿ ಜಯರಾಮಬಾಟಿಗೆ ಹೋಗಲು ರಸ್ತೆ ಮಾರ್ಗವನ್ನು (ವರ್ಧಮಾನ ಮಾರ್ಗ) ಬಳಸುತ್ತಿದ್ದರು. ಆದರೆ ವಿಷ್ಣುಪುರಕ್ಕೆ ರೈಲು ಮಾರ್ಗ ಪ್ರಾರಂಭವಾದ ನಂತರ ಅವರು ಈ ಮಾರ್ಗದಲ್ಲಿಯೇ ಸಂಚರಿಸುತ್ತಿದ್ದರು. ರೈಲು ಪ್ರಯಾಣವು ಅವರಿಗೆ ಅನುಕೂಲವಾಗಿತ್ತು. ವಿಷ್ಣುಪುರ ಮತ್ತು ಕೊಯಲಪಾರ ಈ ಎರಡೂ ಸಹ ಅವರ ತಂಗುದಾಣಗಳಾಗಿದ್ದವು. ವಿಷ್ಣುಪುರದ ಬಗ್ಗೆ ಶ್ರೀರಾಮಕೃಷ್ಣರು ಹೇಳುವಂತೆ ''ನೋಡು, ವಿಷ್ಣುಪುರವೆಂದರೆ ಅದೊಂದು ಗುಪ್ತ ಬೃಂದಾವನ.'' ಈ ವಿಷ್ಣುಪುರ ರೈಲು ನಿಲ್ದಾಣದಲ್ಲಿ ನಡೆದ ಒಂದು ವಿಶೇಷ ಘಟನೆ ಇಲ್ಲಿ ಸ್ಮರಣೀಯವಾದುದು. ಶ್ರೀಮಾತೆಯವರ ಮಾತೃ ಹೃದಯದಲ್ಲಿನ ಗುರುಭಾವ ಹೇಗೆ ಎಲ್ಲರಿಗೂ ಸಮಾನವಾಗಿ ಸ್ಪಂದಿಸುತಿತ್ತು ಎನ್ನುವುದಕ್ಕೆ ಈ ಘಟನೆಯೇ ನಿದರ್ಶನ. ಒಮ್ಮೆ ಶ್ರೀಮಾತೆಯವರು ಜಯರಾಮಬಾಟಿಯಿಂದ ಕೊಲ್ಕತ್ತಾಗೆ ತಮ್ಮ ಸಂಗಡಿಗರೊಂದಿಗೆ ಹೋಗುತ್ತಿದ್ದಾರೆ. ಅವರೆಲ್ಲರೂ ಸಹ ಮೊದಲು ಎತ್ತಿನಗಾಡಿಯಲ್ಲಿ ವಿಷ್ಣುಪುರ ರೈಲು ನಿಲ್ದಾಣಕ್ಕೆ ಬಂದು ರೈಲು ಬರುವಿಕೆಗಾಗಿ ಕಾದು ಕುಳಿತಿದ್ದಾರೆ. ಆಗ ಒಬ್ಬ ಅಪರಿಚಿತ ಕೂಲಿಯವನು ಅವರಲ್ಲಿಗೆ ಓಡಿ ಬಂದು ತನ್ನ ಸ್ವಂತ ಭಾಷೆಯಲ್ಲಿ ಹೇಳಲಾರಂಭಿಸಿದನು, ''ನೀವು ನನ್ನ ಜಾನಕೀಮಾತೆ, ನಿಮಗಾಗಿ ನಾನು ಎಷ್ಟೋ ದಿನಗಳಿಂದ ಹುಡುಕುತ್ತಿದ್ದೆ. ಇಷ್ಟು ದಿನ ನೀವು ಎಲ್ಲಿದ್ದೀರಿ ತಾಯಿ?'' ಹೀಗೆ ಹೇಳಿ ಅವನು ಜೋರಾಗಿ ಅಳಲಾರಂಭಿಸಿದನು. ಕರುಣಾಮಯಿಯಾದ ತಾಯಿ ಅವನನ್ನು ಸಮಾಧಾನಪಡಿಸುತ್ತ ಒಂದು ಹೂವನ್ನು ತೆಗೆದುಕೊಂಡು ಬರಲು ಹೇಳಿದರು. ಅವನು ಹೂವನ್ನು ತಂದು ಅವರ ಪಾದಪದ್ಮಗಳಿಗೆ ಅರ್ಪಿಸಿದನು. ಶ್ರೀಮಾತೆಯವರು ಕೃಪೆಮಾಡಿ ಅವನಿಗೆ ರೈಲು ನಿಲ್ದಾಣದಲ್ಲಿಯೇ ಮಂತ್ರದೀಕ್ಷೆಯನ್ನು ನೀಡಿದರು.

ಶ್ರೀಮಾತೆಯವರ ಮಾತೃವಾತ್ಸಲ್ಯಕ್ಕೆ ಮತ್ತೊಂದು ನಿದರ್ಶನವಾಗಿ ಹೌರಾ ರೈಲು ನಿಲ್ದಾಣದಲ್ಲಿ ನಡೆದ ಈ ಹೃದಯಸ್ಪರ್ಶಿ ಘಟನೆಯಲ್ಲಿ ಉಲ್ಲೇಖನೀಯವಾದುದು. ಸ್ವಾಮಿ ಲೋಕೇಶ್ವರಾನಂದರು ಈ ಘಟನೆಯನ್ನು ಹೇಳಿದ್ದಾರೆ. ಸ್ವಾಮಿ ಬ್ರಹ್ಮಾನಂದರ ಶಿಷ್ಯರಾದ ಪಶುಪತಿ ಮಹಾರಾಜರು (ಸ್ವಾಮಿ ವಿಜಯಾನಂದರು) ತಮ್ಮ ನೆನಪಿನಂಗಳದಿಂದ ಹೇಳಿದ ಮಹತ್ವದ ವಿಷಯಗಳನ್ನು ಇಲ್ಲಿ ವಿವರಿಸಲಾಗುತ್ತಿದೆ. ಅವರು ಪ್ರಥಮ ಬಾರಿಗೆ ಶ್ರೀಮಾತೆ ಮತ್ತು ಸ್ವಾಮಿ ಬ್ರಹ್ಮಾನಂದರನ್ನು ನೋಡಿದ್ದು ಹೌರಾ ರೈಲು ನಿಲ್ದಾಣದಲ್ಲಿ. ಈ ಭೇಟಿಯ ಬಗ್ಗೆ ಅವರೇ ಹೇಳಿರುವಂತೆ. ''ನಾನು ಅನೇಕರ ಬಳಿ ಸ್ವಾಮಿ ಬ್ರಹ್ಮಾನಂದರ ಬಗ್ಗೆ ಕೇಳಿದ್ದೆನು. ಆದ್ದರಿಂದ ಅವರನ್ನು ನೋಡಲು ತುಂಬಾ ಉತ್ಸುಕನಾಗಿದ್ದೆನು. ಒಂದು ದಿನ ನನಗೆ ಪರಿಚಿತರಾಗಿದ್ದ ಒಬ್ಬ ವ್ಯಕ್ತಿ ಹೇಳಿದರು: 'ಈ ದಿನ ಬೆಳಿಗ್ಗೆ ಒಂಭತ್ತು ಗಂಟೆಗೆ ಹೌರಾ ರೈಲು ನಿಲ್ದಾಣಕ್ಕೆ ಹೋದರೆ ನೀನು ಸ್ವಾಮಿ ಬ್ರಹ್ಮಾನಂದರನ್ನು ನೋಡಬಹುದು. ಅವರು ಇಂದು ಭುವನೇಶ್ವರಕ್ಕೆ ಹೋಗುವರು.' ಆ ಮಾತುಗಳನ್ನು ಕೇಳಿ ನಾನು ಹೌರಾ ರೈಲು ನಿಲ್ದಾಣಕ್ಕೆ ಹೋಗಿ ನಿಗದಿತ ಪ್ಲಾಟ್‌ಫಾರ್ಮ್‌ನಲ್ಲಿ ನಿರೀಕ್ಷಿಸಲಾರಂಭಿಸಿದೆನು. ಭುವನೇಶ್ವರಕ್ಕೆ ಹೋಗುವ ರೈಲು ಪ್ಲಾಟ್‌ಫಾರ್ಮ್‌ನಲ್ಲಿಯೇ ನಿಂತಿದೆ ಮತ್ತು ಅನೇಕ ಜನ ಭಕ್ತರು, ಸಾಧು ಬ್ರಹ್ಮಚಾರಿಗಳು ಅಲ್ಲಿ ಮುಂಚಿನಿಂದಲೇ ನಿರೀಕ್ಷಿಸುತ್ತಿದ್ದಾರೆ. ಸ್ವಲ್ಪ ಸಮಯದ ನಂತರವೇ ನೋಡಿದೆ, ಒಂದು ದೊಡ್ಡ ಕಾರಿನಲ್ಲಿ ಆರೋಗ್ಯವಂತ ದೀರ್ಘಕಾಯದ ಪ್ರೌಢ ಸಂನ್ಯಾಸಿ

ಯೊಬ್ಬರು ನಿಲ್ದಾಣಕ್ಕೆ ಬಂದರು. ಎಲ್ಲರೂ ಹೇಳುವುದನ್ನು ಕೇಳಿದ್ದೆ. ಅವರೇ ಸ್ವಾಮಿ ಬ್ರಹ್ಮಾನಂದ ಮಹಾರಾಜರು ಎಂದು. ಆ ಕಾರು ಕೂಚ್‌ಬಿಹಾರದ ಮಹಾರಾಜರದಾಗಿತ್ತು. ಸ್ವಾಮಿ ಬ್ರಹ್ಮಾನಂದರು ಪ್ಲಾಟ್‌ಫಾರ್ಮ್‌ಗೆ ಬಂದು ಅವರು ಹೋಗಬೇಕಾಗಿರುವ ರೈಲಿನ ಬಳಿ ಹೋಗದೆ ಪಕ್ಕದ ಪ್ಲಾಟ್‌ಫಾರ್ಮ್‌ನಲ್ಲಿ ಯಾವ ರೈಲು ನಿಂತಿತ್ತೊ ಆ ಕಡೆಗೆ ಕರ ಜೋಡಿಸಿಕೊಂಡು ನಡೆಯಲಾರಂಭಿಸಿದರು. ಸ್ವಾಮಿ ಬ್ರಹ್ಮಾನಂದರು ಆ ರೈಲಿನ ಒಂದು ಬೋಗಿಯ ಮುಂದೆ ಹೋಗಿ ಪ್ಲಾಟ್‌ಫಾರ್ಮ್‌ನ ಮೇಲೆಯೇ ಸಾಷ್ಟಾಂಗ ಪ್ರಣಾಮವನ್ನು ಮಾಡಿದರು. ಆ ಜಾಗದಲ್ಲಿ ಎಷ್ಟು ಕಸ, ಧೂಳು, ಕೊಳಕು ಬಿದ್ದಿದೆ. ಅದಲ್ಲದೆ ಎಷ್ಟೊಂದು ಜನರು ಅಲ್ಲಿ ನಡೆದಾಡುತ್ತಿದ್ದಾರೆ! ಆದರೆ, ಮಹಾರಾಜರು ಇದವುದನ್ನು ಸಹ ಲೆಕ್ಕಿಸದೆ ಈ ರೀತಿಯಾಗಿ ಸಾಷ್ಟಾಂಗ ಪ್ರಣಾಮ ಮಾಡಿ ಆ ಬೋಗಿಯನ್ನು ಹತ್ತಿ ಒಬ್ಬ ಮಹಿಳೆಯ ಮುಂದೆ ಹೋಗಿ ನಿಂತರು. ಅವರೇ ಶ್ರೀಮಾತೆಯವರೆಂದು ಕೇಳಿ ತಿಳಿದುಕೊಂಡೆನು. ಅವರು ಜಯರಾಮಬಾಟಿಗೆ ಹೋಗುವವರಿದ್ದರು. ಅವರ ರೈಲು ಗಾಡಿಯ ಮತ್ತು ಮಹಾರಾಜರ ಗಾಡಿಯ ಸಮಯ ಪ್ರಾಯಶಃ ಒಂದೇ ಆಗಿತ್ತು. ಶ್ರೀಮಾತೆಯವರದೂ ಸಹ ನನಗೆ ಇದೇ ಪ್ರಥಮ ದರ್ಶನವಾಗಿತ್ತು. ಸ್ವಾಮಿ ಬ್ರಹ್ಮಾನಂದರು ನೇರವಾಗಿ ಶ್ರೀಮಾತೆಯವರನ್ನು ನೋಡದೆ ಕರ ಜೋಡಿಸಿಕೊಂಡು ಹೇಳಿದರು: 'ಅಮ್ಮಾ, ನಾನು ಭುವನೇಶ್ವರಕ್ಕೆ ಹೋಗುತ್ತಿರುವೆ. ನೀವು ಒಮ್ಮೆ ಅಲ್ಲಿನ ಮಠಕ್ಕೆ ಬಂದು ನಿಮ್ಮ ಪಾದಧೂಳಿಯನ್ನು ನೀಡಬೇಕು' ಎಂದು. ಶ್ರೀಮಾತೆಯವರು ಮುಸುಕಿನ ಒಳಗಿನಿಂದಲೇ ತಲೆಯನ್ನಾಡಿಸಿ ಸಮ್ಮತಿ ನೀಡಿದರು. ನಂತರ ಮೃದು ಸ್ವರದಲ್ಲಿ ಹೇಳಿದರು: 'ಸಾವಧಾನದಿಂದ ಹೋಗಿ ಬಾರಪ್ಪಾ – ಕೇಳಿದ್ದೇನೆ ಅಲ್ಲಿ ತುಂಬಾ ಮಲೇರಿಯಾ ಹರಡಿದೆ ಎಂದು. ಸಾವಧಾನದಿಂದ ಇರು, ನೀರನ್ನು ಕುದಿಸಿಕೊಂಡು ಕುಡಿ.' ಶ್ರೀಮಾತೆಯವರ ರೈಲು ಹೊರಡುವ ಸಮಯವಾಯಿತು. ಮಹಾರಾಜರು ಹೇಗೆ ಭಾವಾವಸ್ಥರಾಗಿ ಕರಜೋಡಿಸಿಕೊಂಡು ಶ್ರೀಮಾತೆಯವರ ಸಮ್ಮುಖದಿಂದ ಹಿಂದೆ ಬರುತ್ತಾ ನಿಧಾನವಾಗಿ ಬೋಗಿಯಿಂದ ಕೆಳಗೆ ಇಳಿದು ಬಂದರು ಎನ್ನುವುದನ್ನು ನೋಡಿದೆ. ಪ್ಲಾಟ್‌ಫಾರ್ಮ್ ಮೇಲೆ ಪುನಃ ಶ್ರೀಮಾತೆಯವರನ್ನು ಉದ್ದೇಶಿಸಿ ಈ ಮೊದಲಿನಂತೆಯೇ ಸಾಷ್ಟಾಂಗ ಪ್ರಣಾಮ ಮಾಡಿದರು. ನಂತರ ಎದ್ದು ತಲೆಯನ್ನು ಬಾಗಿಸಿ ಶ್ರೀಮಾತೆಯವರ ರೈಲುಗಾಡಿ ಪ್ಲಾಟ್‌ಫಾರ್ಮ್‌ನಿಂದ ಹೋಗುವವರು ಹಾಗೆಯೇ ನಿಂತುಕೊಂಡಿದ್ದರು. ಆ ದೃಶ್ಯವನ್ನು ನಾನು ನನ್ನ ಜೀವನದಲ್ಲಿ ಎಂದೂ ಸಹ ಮರೆಯಲು ಸಾಧ್ಯವಿಲ್ಲ.''

ಶ್ರೀಮಾತೆಯವರು ಅನೇಕ ಬಾರಿ ಜಯರಾಮಬಾಟಿ ಮತ್ತು ಕೊಲ್ಕತ್ತಾಗೆ ಹೋಗಿ ಬರುತ್ತಿದ್ದರು. ಅವರು ವಿಷ್ಣುಪುರ ಮಾರ್ಗವಾಗಿ ರೈಲು ಪ್ರಯಾಣವನ್ನು ಮಾಡುತ್ತಿದ್ದರು ಎನ್ನುವುದನ್ನು ಈ ಮೊದಲೇ ಉಲ್ಲೇಖಿಸಲಾಗಿದೆ. ಜಯರಾಮಬಾಟಿಯಲ್ಲಿ ಅವರಿಗಾಗಿ ಹೊಸಮನೆಯನ್ನು ಕಟ್ಟಿಸಿದಾಗ, ಆ ಹೊಸಮನೆಯ ಆಸ್ತಿಯ ದಸ್ತಾವೇಜಿನ ದಾಖಲಾತಿ ಮುಂತಾದವುಗಳನ್ನು ನೋಡಿಕೊಳ್ಳಲು ಸ್ವಯಂ ಸ್ವಾಮಿ ಶಾರದಾನಂದರು ಜಯರಾಮಬಾಟಿಗೆ ಬಂದಿದ್ದರು. ಈ ಎಲ್ಲಾ ಕಾರ್ಯದ ನಂತರ ಸ್ವಾಮಿ ಶಾರದಾನಂದರು ಹಾಗೂ ಮತ್ತಿತರು ಶ್ರೀಮಾತೆಯೊಡನೆ ವಿಷ್ಣುಪುರ ಮಾರ್ಗವಾಗಿ ರೈಲಿನಲ್ಲಿ ಕೊಲ್ಕತ್ತಾಗೆ ಹೋದರು. ಕೆಲವು ಕಾಲದ ನಂತರ ಶ್ರೀಮಾತೆಯವರು ಜಗದ್ಧಾತ್ರಿ ಪೂಜೆಯ ಸಲುವಾಗಿ ಜಯರಾಮಬಾಟಿಗೆ ಬಂದರು. ಜಯರಾಮಬಾಟಿಯಲ್ಲಿ ಕೆಲವು ಕಾಲವಿದ್ದ ಬಳಿಕ ಶ್ರೀಮಾತೆಯವರು ಕೊನೆಯ ಬಾರಿಗೆ ಅಲ್ಲಿಂದ ಕೊಲ್ಕತ್ತಾಗೆ ಹೊರಟರು. ಆಗ ಅವರ ಆರೋಗ್ಯ ತುಂಬಾ ಹದಗೆಟ್ಟಿತ್ತು. ಬಹುಶಃ ಶ್ರೀಮಾತೆಯವರಿಗೆ ತಾವು ಪುನಃ ಜಯರಾಮಬಾಟಿಗೆ ಮರಳುವುದಿಲ್ಲ ಎಂದು ತಿಳಿದಿರಬೇಕು, ಆದ್ದರಿಂದ ಅವರು ಭಾವುಕರಾಗಿದ್ದರು. ಫೆಬ್ರವರಿ ೨೪, ೧೯೨೦ರಂದು ರಾಧು, ಮಾಕು, ಸುರಬಾಲೆ, ನಳಿನಿ, ನವಾಸನನ ಪತ್ನಿ ಹಾಗೂ ವರದ ಬ್ರಹ್ಮಚಾರಿಗಳು ಶ್ರೀಮಾತೆಯವರ ಜೊತೆಗೆ ರೈಲಿನಲ್ಲಿ ಹೋಗಲು ಸಿದ್ಧರಾದರು. ಎಲ್ಲರೂ ಸಹ ಮೊದಲು ಕೊಯಲಪಾರ ಆಶ್ರಮಕ್ಕೆ ಹೋಗಿ, ರಾಧು ಮೊದಲಾದ ಹೆಣ್ಣುಮಕ್ಕಳೊಂದಿಗೆ ಎತ್ತಿನಗಾಡಿಯಲ್ಲಿ ಆ ದಿನ ಸಂಜೆಯೇ  ವಿಷ್ಣುಪುರ ತಲುಪಿದರು. ಆದರೆ, ಶ್ರೀಮಾತೆ ಮತ್ತು ಮಾಕು ಪಲ್ಲಕ್ಕಿಯಲ್ಲಿ ಮರುದಿನ ಮುಂಜಾನೆ ಐದು ಗಂಟೆಯ ಹೊತ್ತಿಗೆ ಕೊಯಲಪಾರ ಜಗದಂಬಾ ಆಶ್ರಮದಿಂದ ಹೊರಟರು. ವರದಾ ಮಹಾರಾಜರು ಶ್ರೀಮಾತೆಯವರ ಪಲ್ಲಕ್ಕಿಯೊಂದಿಗೆ ಹೋಗುತ್ತಿದ್ದರು. ಸುಮಾರು ಹನ್ನೆರಡು ಗಂಟೆಯ ಹೊತ್ತಿಗೆ ಅವರು ವಿಷ್ಣುಪುರದ ಸುರೇಶ್ವರ ಬಾಬುವಿನ ಮನೆಯನ್ನು ತಲುಪಿದರು. ಅಂದು ವಿಷ್ಣುಪುರದಲ್ಲಿಯೇ ತಂಗಿದ್ದು, ಮರುದಿನ ಮಧ್ಯಾಹ್ನ ಊಟ ಇತ್ಯಾದಿ ಮುಗಿಸಿಕೊಂಡು ಶ್ರೀಮಾತೆಯವರು ಮತ್ತು ಅವರ ಸಂಗಡಿಗರು ಮೂರನೆಯ ದರ್ಜೆ ರೈಲು ಗಾಡಿಯಲ್ಲಿ ಕೊಲ್ಕತ್ತಾಗೆ ಹೊರಟರು. ರಾತ್ರಿ ಸುಮಾರು ೯ ಅಥವಾ ೧೦ ಗಂಟೆಯ ವೇಳೆಗೆ ಅವರು ಉದ್ಬೋಧನಕ್ಕೆ ಬಂದು ತಲುಪಿದರು. ಇದೇ ಶ್ರೀಮಾತೆಯವರ ಕೊನೆಯ ರೈಲು ಪ್ರಯಾಣವಾಗಿತ್ತು.

### ಸ್ವಾಮಿ ವಿವೇಕಾನಂದರು

ಸನಾತನ ಧರ್ಮವನ್ನು ಪುನರುತ್ಥಾನಗೊಳಿಸಲು ದೇಶ–ವಿದೇಶದಲ್ಲಿ ಕೊನೆಯುಸಿರು ಇರುವವರೆಗೂ ನಿರಂತರ ಪ್ರಯತ್ನಿಸಿ ಭಾರತಮಾತೆಯ ಕೀರ್ತಿ ಪ್ರತಿಷ್ಠೆಗಳನ್ನು ಉಜ್ವಲಗೊಳಿಸಿದರು ಸ್ವಾಮಿ ವಿವೇಕಾನಂದರು. ಅವರು ಪರಿವ್ರಾಜಕರಾಗಿ ಮಾಡಿದ ಭಾರತ ಪರಿಭ್ರಮಣೆ, ವಿದೇಶಗಳಲ್ಲಿನ ಪ್ರಚಾರ ಯಾತ್ರೆ, ತೀರ್ಥಯಾತ್ರೆ ಹೀಗೆ ಹಲವಾರು ಸಂದರ್ಭಗಳಲ್ಲಿ ಅವರು ಕಾಲುನಡಿಗೆ, ರೈಲುಗಾಡಿ, ಎತ್ತಿನ ಗಾಡಿ, ಹಡಗು–ಉಗಿ ದೋಣಿ, ಪಲ್ಲಕ್ಕಿ ಮುಂತಾದವುಗಳಲ್ಲಿ ಪ್ರಯಾಣ ಮಾಡಿರುವರು. ವಿಶೇಷವಾಗಿ ರೈಲು ಗಾಡಿಯಲ್ಲಿಯೇ ಅವರು ಹೆಚ್ಚಿನ ಪ್ರಯಾಣ ಮಾಡಿರುವರು. ಅವರ ಈ ಪ್ರಯಾಣ ಸಂದರ್ಭದಲ್ಲಿನ ಅನುಭವಗಳನ್ನು, ಸಂಗಡಿಗರ ಅನುಭವಗಳನ್ನು ಮತ್ತು ಕೆಲವು ವಿಶೇಷವಾದ ಘಟನೆಗಳನ್ನು ಈ ಲೇಖನದಲ್ಲಿ ಸಂಗ್ರಹಿಸಲಾಗಿದೆ. ಸ್ವಾಮೀಜಿಯವರು ಮಾಡಿರುವ ಅಸಂಖ್ಯ ಯಾತ್ರೆಗಳನ್ನು ಉಲ್ಲೇಖಿಸುವುದು ಬಹುಶಃ ಅಸಾಧ್ಯ ಎಂದರೆ ತಪ್ಪಾಗಲಾರದು.

**೧. ಬಾಲ್ಯಕಾಲದ ಬಹುದೂರದ ಪ್ರಯಾಣದಲ್ಲಿ:** ನರೇಂದ್ರನಾಥನು ಬಾಲ್ಯಕಾಲದಲ್ಲಿ ಮೊಟ್ಟಮೊದಲಿಗೆ ತನ್ನ ಪರಿವಾರದೊಂದಿಗೆ ಬಹುದೂರದ ಯಾತ್ರೆ ಮಾಡಿದ್ದು ಕೊಲ್ಕತ್ತಾದಿಂದ ರಾಯಪುರಕ್ಕೆ. ನರೇಂದ್ರನಾಥನ ತಂದೆ ವಿಶ್ವನಾಥದತ್ತನು ಕಾರ್ಯ ನಿಮಿತ್ತವಾಗಿ ಮೊದಲೇ ರಾಯಪುರಕ್ಕೆ ಹೋಗಿ ನೆಲೆಸಿದ್ದನು. ಕೆಲವು ಕಾಲದ ನಂತರ ನರೇಂದ್ರನಾಥನು ತನ್ನ ೧೪ನೆಯ ವಯಸ್ಸಿನಲ್ಲಿ ೧೮೭೭ನೇಯ ಇಸ್ವಿಯಲ್ಲಿ ಪರಿವಾರ ಸಮೇತವಾಗಿ ರಾಯಪುರಕ್ಕೆ ಹೊರಟನು. ಆಗಿನ ಕಾಲದಲ್ಲಿ ರೈಲು ಮಾರ್ಗವು ನಾಗಪುರದ ವರೆಗೆ ಮಾತ್ರ ನಿರ್ಮಾಣವಾಗಿತ್ತು. ಆದ್ದರಿಂದ ಕೊಲ್ಕತ್ತಾದಿಂದ ನಾಗಪುರದವರೆಗೆ ರೈಲು ಪ್ರಯಾಣ ಮಾಡಿದ ನಂತರ ಅವರು ಎತ್ತಿನ ಗಾಡಿಯಲ್ಲಿ ಅಲಹಾಬಾದ್ ಮತ್ತು ಜಬಲ್‌ಪುರ ಮಾರ್ಗವಾಗಿ ವಿಂಧ್ಯ ಪರ್ವತಗಳ ದಟ್ಟವಾದ ಅರಣ್ಯದ ಮೂಲಕ ಸುಮಾರು ೧೫ ದಿನಗಳ ಪ್ರಯಾಣ ಮಾಡಿ ರಾಯಪುರವನ್ನು ತಲುಪಿದರು. ಈ ಪ್ರಯಾಣದ ನೇತೃತ್ವವನ್ನು ಬಾಲಕ ನರೇಂದ್ರನಾಥನು ವಹಿಸಿಕೊಂಡಿದ್ದನು. ಈ ಯಾತ್ರೆಯಲ್ಲಿ ಪ್ರಥಮ ಬಾರಿ ಅವನಿಗೆ ಒಂದು ದಿವ್ಯ ಅನುಭವವಾಯಿತು. ಗಾಢವಾದ ಅರಣ್ಯದಲ್ಲಿನ ಹಚ್ಚ ಹಸುರಿನ ಸುಂದರ ದೃಶ್ಯ, ಪರ್ವತ ಶ್ರೇಣಿಗಳು, ಕಣಿವೆ ಮತ್ತು ವೃಕ್ಷಗಳಲ್ಲಿದ್ದ ದೊಡ್ಡ ದೊಡ್ಡ ಜೇನು ಗೂಡುಗಳನ್ನು ನೋಡಿ ಅವನು ಭಗವಂತನ ಅದ್ಭುತ ಸೃಷ್ಟಿಯನ್ನು ನೆನೆಯುತ್ತಾ ಕೆಲಕಾಲ ಬಾಹ್ಯಪ್ರಜ್ಞೆಯನ್ನು ಕಳೆದುಕೊಂಡನು. ಬಹುಶಃ ಇದೇ ನರೇಂದ್ರನಾಥನ ಪ್ರಥಮ ಭಾವಾವಸ್ಥೆ. ಎರಡು ವರ್ಷಗಳ ನಂತರ ವಿಶ್ವನಾಥದತ್ತನು ಪರಿವಾರ ಸಮೇತವಾಗಿ ಪುನಃ ರಾಯಪುರದಿಂದ ಕೊಲ್ಕತ್ತಾಗೆ ಮರಳಿದನು.

**೨.ಬುದ್ಧಗಯಾ ಯಾತ್ರೆಯಲ್ಲಿ:** ನರೇಂದ್ರನಾಥನು ಶ್ರೀರಾಮಕೃಷ್ಣರ ಸಂಪರ್ಕಕ್ಕೆ ಬಂದ ನಂತರ ಅವನಲ್ಲಿ ಅಂಕುರಗೊಂಡಿದ್ದ ಆಧ್ಯಾತ್ಮಿಕ ತೃಷೆಯು ತೀವ್ರವಾಯಿತು. ಸಾಧನೆಯಲ್ಲಿ ಆಳವಾಗಿ ತನ್ನನ್ನು ತೊಡಗಿಸಿಕೊಂಡಿದ್ದ ನರೇಂದ್ರನಾಥನು ಭಗವಂತನ ದರ್ಶನಕ್ಕಾಗಿ ವ್ಯಾಕುಲಗೊಂಡಿದ್ದನು. ಶ್ರೀರಾಮಕೃಷ್ಣರು ಆಗ ಕಾಶೀಪುರ ಉದ್ಯಾನಗೃಹದಲ್ಲಿ ರೋಗಗ್ರಸ್ತರಾಗಿ ತಮ್ಮ ಅಂತಿಮ ಕಾಲದಲ್ಲಿದ್ದರು. ಅನೇಕ ಶಿಷ್ಯರು ಅವರ ಶುಶ್ರೂಷೆ ಮಾಡುತ್ತಿದ್ದರು. ಈ ಸಮಯದಲ್ಲಿ ಒಮ್ಮೆ ನರೇಂದ್ರನಾಥನು ಬುದ್ಧದೇವನ ಜೀವನದಿಂದ ಪ್ರೇರಿತನಾಗಿ ದೈವ ಸಾಕ್ಷಾತ್ಕಾರದ ಉದ್ದೇಶದಿಂದ ತಾರಕ (ಸ್ವಾಮಿ ಶಿವಾನಂದರು) ಮತ್ತು ಕಾಳಿ (ಸ್ವಾಮಿ ಅಭೇದಾನಂದರು) ಯೊಂದಿಗೆ ೧೮೮೬ರ ಏಪ್ರಿಲ್ ತಿಂಗಳಿನಲ್ಲಿ ಯಾರಿಗೂ ಹೇಳದೆ ಬುದ್ಧಗಯಾಗೆ ಹೊರಟನು. ತಾರಕನು ರೈಲು ಪ್ರಯಾಣದ ಖರ್ಚಿನ ವ್ಯವಸ್ಥೆ ಮಾಡಿದ್ದನು. ಕಾಶೀಪುರ ಉದ್ಯಾನಗೃಹದಿಂದ ಅವರು ಮೊದಲು ಗಂಗೆಯನ್ನು ದಾಟಿ ಬಾಲಿ ಎನ್ನುವ ಸ್ಥಳದಲ್ಲಿದ್ದ ರೈಲು ನಿಲ್ದಾಣಕ್ಕೆ ಬಂದರು. ರೈಲುಗಾಡಿಯಲ್ಲಿ ಗಯಾಧಾಮಕ್ಕೆ ತಲುಪಿದರು. ಈ ಮೂವರು ಸ್ನೇಹಿತರು ಗೈರಿಕ ವಸನವನ್ನು ಧರಿಸಿ ೭ ಮೈಲು ನಡೆದು ಬುದ್ಧನು ಸಾಧನೆ ಮಾಡಿದ ಬೋಧಿವೃಕ್ಷದ ಬಳಿಗೆ ಹೋಗಿ ತೀವ್ರ ಧ್ಯಾನ, ಸಾಧನೆಯಲ್ಲಿ ಮುಳುಗಿದರು. ಬುದ್ಧನ ಪರಮ ಪವಿತ್ರ ಜೀವನ, ಅವನ ಸಂದೇಶ, ಕರುಣೆ ಎಲ್ಲವೂ ನರೇಂದ್ರ ಹೃದಯವನ್ನು ಪ್ರವೇಶಿಸಿ ಅದ್ಭುತ ದಿವ್ಯ ಅನುಭವವನ್ನು ಉಂಟು ಮಾಡಿದವು. ನರೇಂದ್ರನು ಈ ದಿವ್ಯ ಅನುಭವದ ಭಾವನೆಗಳನ್ನು ತಾಳದೆ ತನ್ನ ಬಳಿಯಲ್ಲಿದ್ದ ತಾರಕನೊಂದಿಗೆ ಹಂಚಿಕೊಂಡನು. ಹೀಗೆ ೩-೪ ದಿನಗಳ ನಂತರ ಅವರೆಲ್ಲರೂ ಮರಳಿ ಕೊಲ್ಕತ್ತೆಗೆ ಹೊರಟರು. ರೈಲು ಪ್ರಯಾಣದ ಹಣವನ್ನು ಬುದ್ಧಗಯಾ ದೇವಾಲಯದ ಮುಖ್ಯಸ್ಥ ಮತ್ತು ಗಯೆಯಲ್ಲಿದ್ದ ನರೇಂದ್ರನಾಥನ ತಂದೆಯ ಸ್ನೇಹಿತನಿಂದ ಪಡೆದಿದ್ದರು. ಮರಳಿ ಕಾಶೀಪುರಕ್ಕೆ ಬಂದು ಶ್ರೀ ರಾಮಕೃಷ್ಣರ ಬಳಿ ತಮ್ಮ ಗಯಾ ಯಾತ್ರೆಯ ಅನುಭವಗಳನ್ನು ಹೇಳಿಕೊಂಡರು.

**೩. ಬಾರಾನಗರ ಮಠದ ದಿನಗಳಲ್ಲಿನ ತೀರ್ಥಭ್ರಮಣೆಗಳಲ್ಲಿ:** ಶ್ರೀ ರಾಮಕೃಷ್ಣರ ಲೀಲಾವಸಾನದ ನಂತರ (೧೮೮೬, ೧೬ ಆಗಸ್ಟ್) ನರೇಂದ್ರನಾಥ ಮತ್ತು ಅವರ ಇತರ ಶಿಷ್ಯರು ಬಾಬುರಾಮನ (ಸ್ವಾಮಿ ಪ್ರೇಮಾನಂದರು) ತಾಯಿಯ ಆಹ್ವಾನದ ಮೇರೆಗೆ ಹೂಗ್ಲಿ ಜಿಲ್ಲೆಯ ಆಂಟ್‌ಪುರಕ್ಕೆ ೧೮೮೬, ಡಿಸೆಂಬರ್ ತಿಂಗಳಿನಲ್ಲಿ ಮೂರನೆಯ ವಾರದಲ್ಲಿ ಹೋದರು. ೨೪ನೇಯ ಡಿಸೆಂಬರ್ ರಾತ್ರಿ ಎಲ್ಲರೂ ಧುನಿ (ಬೆಂಕಿ)ಯ ಬಳಿ ಕುಳಿತು ಧ್ಯಾನದಲ್ಲಿ ನಿರತರಾಗಿದ್ದಾಗ ಹಠಾತ್ತಾಗಿ ನರೇಂದ್ರನು ಯೇಸುಕ್ರಿಸ್ತನ ಬಗ್ಗೆ ವಿಸ್ತಾರವಾಗಿ ಮಾತನಾಡಿದ ಘಟನೆ ನಮ್ಮೆಲ್ಲರಿಗೂ ಸುಪರಿಚಿತವಾದುದು. ೧೮೮೭ರ ಜನವರಿ ತಿಂಗಳಿನಲ್ಲಿ ಎಲ್ಲರೂ ವಿಧಿವತ್ತಾಗಿ ವಿರಜಾಹೋಮ ಮಾಡಿ ಸಂನ್ಯಾಸ ಗ್ರಹಣ ಮಾಡಿದ ನಂತರ ಸಂನ್ಯಾಸ ನಾಮಗಳನ್ನು ಸ್ವೀಕರಿಸಿದರು. ನರೇಂದ್ರನಾಥನು ಸ್ವಾಮಿ ವಿವೇಕಾನಂದರಾಗಿ ಪರಿಚಿತನಾದನು. ನಂತರ ಇದೇ ತಿಂಗಳಿನಲ್ಲಿ ಸ್ವಾಮಿ ವಿವೇಕಾನಂದರು, ಬ್ರಹ್ಮಾನಂದರು, ಪ್ರೇಮಾನಂದರು ಮತ್ತು ಅದ್ವೈತಾನಂದರೊಂದಿಗೆ ಪುನಃ ಆಂಟ್‌ಪುರಕ್ಕೆ ಹೋಗಿದ್ದರು. ೧೮೮೭ರ ಬೇಸಿಗೆಯಲ್ಲಿ ಆ ಸ್ವಾಮೀಜಿಯವರಿಗೆ ಮೂತ್ರಕೋಶಗಳ ತೊಂದರೆಯಿಂದಾಗಿ ಜ್ವರ ಉಂಟಾಗಿದ್ದರಿಂದ ಆರೋಗ್ಯ ಸುಧಾರಣೆಗಾಗಿ ಅವರು ಸಿಮುಲತಲಾ ಮತ್ತು ವೈದ್ಯನಾಥಕ್ಕೆ ಹೋಗಿ ನೆಲೆಸಿದ್ದರು. ನಂತರ ಬಹುಶಃ ೧೮೮೭ ಕೊನೆಯಲ್ಲಿ ಅವರು ಬಾರಾನಗರ ಮಠವನ್ನು ಬಿಟ್ಟು ಸ್ವಾಮಿ ಪ್ರೇಮಾನಂದರು ಮತ್ತು ಫಕೀರ ಎನ್ನುವ ಭಕ್ತನೊಡನೆ ವಾರಾಣಸಿ ಯಾತ್ರೆಗೆ ರೈಲುಗಾಡಿಯಲ್ಲಿ ಹೊರಟರು. ವಾರಾಣಸಿಯಲ್ಲಿ ಅವರು ಅನೇಕ ದೇವಾಲಯಗಳನ್ನು ದರ್ಶನ ಮಾಡಿದರು. ಸ್ವಾಮೀಜಿಯವರು ಮಂಗಗಳನ್ನು ಹಿಮ್ಮೆಟ್ಟಿಸಿದ ಘಟನೆ ವಾರಾಣಸಿಯ ದುರ್ಗಾಮಾತೆಯ ಮಂದಿರದಲ್ಲಿ ಈ ಕಾಲದಲ್ಲಿಯೇ ನಡೆದಿತ್ತು. ಸಾರಾನಾಥ ಕ್ಷೇತ್ರದ ದರ್ಶನ, ಸ್ವಾಮಿ ಭಾಸ್ಕರಾನಂದ ಮತ್ತು ತ್ರೈಲಿಂಗ ಸ್ವಾಮಿಗಳ ದರ್ಶನ ಮಾಡಿ ಪುನಃ ಬಾರಾನಗರ ಮಠಕ್ಕೆ ಮರಳಿದರು.

ಕೆಲಕಾಲದ ನಂತರ ೧೮೮೮ರ ಮೊದಲ ಭಾಗದಲ್ಲಿ ಪುನಃ ತೀರ್ಥ ದರ್ಶನಗಳ ಆಕರ್ಷಣೆಯಲ್ಲಿ ಅವರು ವಾರಾಣಸಿ ಧಾಮಕ್ಕೆ ದ್ವಿತೀಯ ಬಾರಿ ತೆರಳಿದರು. ನಂತರ ಅವರು ಬೃಂದಾವನಕ್ಕೆ ಸಾಗಿದರು. ಬೃಂದಾವನದಲ್ಲಿ ಅವರು ಬಲರಾಮಬಾಬುವಿನ

ಕಾಲಾಬಾಬುವಿನ ಕುಂಜದಲ್ಲಿ ನೆಲೆಸಿದರು. ಬೃಂದಾವನದಲ್ಲಿ ಶ್ರೀಕೃಷ್ಣ ಮತ್ತು ಶ್ರೀರಾಧೆಯರ ಲೀಲಾಸ್ಥಾನಗಳನ್ನು ದರ್ಶಿಸಿದರು. ಗೋವರ್ಧನ ಗಿರಿ ಮತ್ತು ರಾಧಾಕುಂಡಗಳಲ್ಲಿ ಅವರಿಗೆ ಶ್ರೀರಾಧೆಯ ಕೃಪಾಶೀರ್ವಾದಗಳು ದೊರೆತ ಘಟನೆಗಳು ತುಂಬಾ ಸ್ವಾರಸ್ಯಕರವಾಗಿವೆ.

ಬೃಂದಾವನದಿಂದ ಹೊರಟು ಅವರು ಹರಿದ್ವಾರಕ್ಕೆ ಹೋಗಲು ರೈಲುಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದರು. ಮಾರ್ಗದಲ್ಲಿ ಅವರು ಹಾತರಾಸ್ ಎನ್ನುವ ರೈಲು ನಿಲ್ದಾಣದಲ್ಲಿ ಇಳಿದರು. ಆ ರೈಲು ನಿಲ್ದಾಣದ ಸಹಕಾರಿ ನಿಲ್ದಾಣ ಅಧಿಕಾರಿಯಾದ ಶ್ರೀಯುತ ಶರಚ್ಚಂದ್ರ ಗುಪ್ತನು ಸ್ವಾಮೀಜಿಯವರ ಮುಖದಲ್ಲಿನ ತೇಜಸ್ಸು ಮತ್ತು ಸೌಮ್ಯ ಭಾವವನ್ನು ಕಂಡು ಆಕರ್ಷಿತನಾಗಿ ನಿಲ್ದಾಣದಲ್ಲಿ ಒಂದು ಕಡೆ ನೆಲದ ಮೇಲೆ ಕುಳಿತ ಅವರ ಬಳಿ ಹೋದನು. ಅವರೊಡನೆ ಪರಿಚಯ ಮಾಡಿಕೊಂಡ ಬಳಿಕ ಅವರನ್ನು ತನ್ನ ಮನೆಗೆ ಆಹಾರ ಸ್ವೀಕರಿಸಲು ಆಹ್ವಾನಿಸಿದನು. ಸ್ವಾಮೀಜಿಯವರು ಒಪ್ಪಿ ಅವನೊಡನೆ ಹೋದರು. ಹೀಗೆ ಅವರ ಪರಿಚಯ ದೃಢವಾಗಿ ಕೊನೆಗೆ ಸ್ವಾಮೀಜಿಯವರ ಜ್ವಲಂತ ವೈರಾಗ್ಯದ ಅಗ್ನಿಯು ಶರಚ್ಚಂದ್ರನನ್ನೂ ಸಹ ಆವರಿಸಿತು. ಶರಚ್ಚಂದ್ರನು ಸ್ವಾಮೀಜಿಯವರ ಪ್ರಭಾವದಿಂದಾಗಿ ಎಲ್ಲವನ್ನು ಸಹ ತ್ಯಾಗ ಮಾಡಿ ಅವರಿಂದ ಶಿಷ್ಯತ್ವವನ್ನು ಪಡೆದು ಅವರನ್ನು ಹಿಂಬಾಲಿಸಿದನು. ಶರಚ್ಚಂದ್ರನು ಮುಂದೆ ಸಂನ್ಯಾಸದ ನಂತರ ಸ್ವಾಮಿ ಸದಾನಂದ ಎನ್ನುವ ಹೆಸರು ಪಡೆದು ಸ್ವಾಮೀಜಿಯವರ ಪ್ರಥಮ ಶಿಷ್ಯನೆಂಬ ಹೆಮ್ಮೆಗೆ ಪಾತ್ರನಾದನು.

ಸ್ವಾಮೀಜಿಯವರು ತಮ್ಮ ಈ ಶಿಷ್ಯನೊಡನೆ ಹಾತರಾಸ್‌ನಿಂದ ಹೃಷೀಕೇಶಕ್ಕೆ ಹೊರಟರು. ಹಿಮಾಲಯದಲ್ಲಿ ಗುರು-ಶಿಷ್ಯರಿಬ್ಬರೂ ಸಹ ಇತರ ಸಾಧುಗಳಂತೆ ಕಠೋರ ಸಾಧನೆಯಲ್ಲಿ ತೊಡಗಿದರು.

೧೮೮೮ರ ಕೊನೆಯ ವೇಳೆಗೆ ಸ್ವಾಮೀಜಿಯವರು ಬಾರಾನಗರ ಮಠಕ್ಕೆ ಹೋಗಿ ಒಂದು ವರ್ಷ ಪೂರ್ತಿ ಅಲ್ಲಿಯೇ ನೆಲೆಸಿದ್ದರು. ೧೮೮೯ರ ಬೇಸಿಗೆಯಲ್ಲಿ ಆರೋಗ್ಯ ಸುಧಾರಣೆ ಮತ್ತು ಸಂಬಂಧಿಕರ ಭೇಟಿಯಾಗಲೂ ಸಿಮುಲತಲಾಗೆ ಹೋಗಿ ಸ್ವಲ್ಪ ಕಾಲವಿದ್ದು ನಂತರ ಮಠಕ್ಕೆ ಮರಳಿದರು.

ಡಿಸೆಂಬರ್ ತಿಂಗಳಿನ ಕೊನೆಯಲ್ಲಿ ಅವರು ಪುನಃ ತೀರ್ಥ ದರ್ಶನಕ್ಕಾಗಿ ಹೊರಟು ಮೊದಲಿಗೆ ವೈದ್ಯನಾಥ ಧಾಮಕ್ಕೆ ಹೋದರು. ಅಲ್ಲಿ ಕೆಲಕಾಲವಿದ್ದ ನಂತರ ವಾರಾಣಸಿಗೆ ಹೋಗಲು ಸಿದ್ಧರಾಗುತ್ತಿದ್ದರು. ಆದರೆ ಸ್ವಾಮಿ ಯೋಗಾನಂದರು ಅಲಹಾಬಾದಿನಲ್ಲಿ ಸಿಡುಬು ರೋಗದಿಂದಾಗಿ ಶಯ್ಯಾಗ್ರಸ್ತರಾಗಿದ್ದರು. ಆದ್ದರಿಂದ ಸ್ವಾಮೀಜಿಯವರು ತಕ್ಷಣವೇ ಅಲ್ಲಿಗೆ ಹೋದರು. ಸೌಭಾಗ್ಯದಿಂದಾಗಿ ಸ್ವಾಮಿ ಯೋಗಾನಂದರು ಬೇಗನೆ ಗುಣಮುಖರಾದರು. ಸ್ವಾಮೀಜಿಯವರು ಅಲ್ಲಿ ಪವಹಾರಿ ಬಾಬಾಜಿಯ ಗುಣಗಾನವನ್ನು ಕೇಳಿ ಅವರನ್ನು ಭೇಟಿಯಾಗಲು ೧೮೯೦, ೨೨ನೆಯ ಜನವರಿಯಂದು ಗಾಜೀಪುರ ತಲುಪಿದರು. ಅಲ್ಲಿ ಅವರು ಪವಹಾರಿ ಬಾಬಾಜಿಯ ಬಳಿ ಹಠಯೋಗದ ನಿಗೂಢ ರಹಸ್ಯಗಳನ್ನು ಕಲಿಯಲು ವಿಶೇಷವಾಗಿ ಉತ್ಸುಕರಾಗಿದ್ದರು. ಪವಹಾರಿ ಬಾಬಾಜಿಯ ಬಳಿ ದೀಕ್ಷೆ ತೆಗೆದುಕೊಳ್ಳಲು ಸಹ ಅವರು ಸಿದ್ಧರಾಗಿದ್ದರು. ಆದರೆ ನಾನಾ ಕಾರಣದಿಂದಾಗಿ ಅದು ಸಾಧ್ಯವಾಗಲಿಲ್ಲ. ವಾರಾಣಸಿಯಲ್ಲಿ ಸ್ವಾಮಿ ಅಭೇದಾನಂದರು ಅನಾರೋಗ್ಯದಿಂದ ನರಳುತ್ತಿರುವ ವಿಷಯವನ್ನು ಕೇಳಿ ಸ್ವಾಮೀಜಿಯವರು ಏಪ್ರಿಲ್ ತಿಂಗಳ ಮೊದಲ ವಾರದಲ್ಲಿ ವಾರಾಣಸಿಗೆ ಹೋಗಿ ತಮ್ಮ ಗುರುಭಾಯಿಯ ಶುಶ್ರೂಷೆ ಮಾಡಿದರು. ೧೩ ನೆಯ ಏಪ್ರಿಲ್‌ನಲ್ಲಿ ಶ್ರೀರಾಮಕೃಷ್ಣರ ಭಕ್ತ ಬಲರಾಮಬಸುವಿನ ಮರಣ ವಾರ್ತೆಯನ್ನು ಕೇಳಿ ದುಃಖಿತರಾಗಿ ಮೇ ತಿಂಗಳಿನಲ್ಲಿ ಕೊಲ್ಕತ್ತಾಗೆ ಮರಳಿದರು. ಬಹುಶಃ ಸ್ವಾಮೀಜಿಯವರು ಗಾಜೀಪುರದಿಂದ ವಾರಾಣಸಿಗೆ ಹೋಗುವಾಗ ನಡೆದ ಒಂದು ಆಶ್ಚರ್ಯಕರವಾದ ಘಟನೆ ಇಲ್ಲಿ ಉಲ್ಲೇಖನೀಯವಾದುದು. ಅವರು ರೈಲುಗಾಡಿಯ ತೃತೀಯ ದರ್ಜೆಯ ಬೋಗಿಯಲ್ಲಿ ಪ್ರಯಾಣಿಸುತ್ತಿದ್ದರು. ಗಾಜೀಪುರದ ಹತ್ತಿರ ತಾರೀಘಾಟ್ ರೈಲು ನಿಲ್ದಾಣದಲ್ಲಿ ಅವರು ಇಳಿದರು. ಆಗ ಉರಿಬಿಸಿಲಿನಿಂದ ಕೂಡಿದ ಬೇಸಿಗೆಯ ಮಧ್ಯಾಹ್ನವಾಗಿತ್ತು. ಅವರ ಬಳಿ ಹಣವಾಗಲಿ, ನೀರಿನ ಪಾತ್ರೆಯಾಗಲಿ ಇರಲಿಲ್ಲ. ಅವರಿಗೆ ತುಂಬಾ ಬಾಯಾರಿಕೆ, ಹಸಿವು ಮತ್ತು ದಣಿವಾಗಿತ್ತು. ಅವರ ಜೊತೆಗೆ ಅದೇ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಒಬ್ಬ ಉತ್ತರ ಭಾರತದ ಶ್ರೀಮಂತ ವ್ಯಕ್ತಿಯೂ ಸಹ ಆ ನಿಲ್ದಾಣದಲ್ಲಿ ಇಳಿದನು. ಆ ನಿಲ್ದಾಣದಲ್ಲಿ ಸ್ವಾಮೀಜಿಯವರಿಗೆ ನೆರಳಿನಲ್ಲಿ ಕುಳಿತುಕೊಳ್ಳಲೂ ಸಹ ಅವಕಾಶವಿರಲಿಲ್ಲ ಮತ್ತು ತಂಪಾದ ನೀರನ್ನು ಹಣಕೊಟ್ಟು ಖರೀದಿಸಬೇಕಿತ್ತು. ಆದ್ದರಿಂದ ಸ್ವಾಮೀಜಿಯವರು ಹತ್ತಿರದ ಒಂದು ಸ್ಥಳದಲ್ಲಿಯೇ ಒರಗಿ ಕುಳಿತುಕೊಂಡರು. ಆ ಶ್ರೀಮಂತ ವ್ಯಕ್ತಿ ಸ್ವಾಮೀಜಿಯವರನ್ನು ಹಂಗಿಸುತ್ತಾ ತಾನು ನಿಲ್ದಾಣದ ನೆರಳಿನಲ್ಲಿ ಕುಳಿತು ತಂಪಾದ ಪಾನೀಯವನ್ನು ಕುಡಿಯುತ್ತಾ ಸಂನ್ಯಾಸಿ ಜೀವನವನ್ನು ಅವಹೇಳನ ಮಾಡತೊಡಗಿದನು. ಸ್ವಾಮೀಜಿಯವರು ಇದಾವುದರ ಕಡೆ ಗಮನಿಸದೆ ನಿರ್ವಿಕಾರದಿಂದಿದ್ದರು. ಹಠಾತ್ತಾಗಿ ಒಬ್ಬ ಮಿಠಾಯಿ ಅಂಗಡಿಯ ವ್ಯಾಪಾರಿಯಾದ ರಾಮಭಕ್ತನೊಬ್ಬ ಬಿಸಿಯಾದ ಆಹಾರ ಮತ್ತು ತಂಪಾದ ಜಲವನ್ನು ನಿಲ್ದಾಣದಲ್ಲಿ ಆ ಕಡೆ ಈ ಕಡೆ ಹುಡುಕುತ್ತಾ ಕೊನೆಗೆ ಸ್ವಾಮೀಜಿಯವರ ಬಳಿ ಬಂದು ಪ್ರಣಾಮ ಮಾಡಿ ಬೇಗನೆ ಆಹಾರ ಸ್ವೀಕರಿಸಲು ವಿನಂತಿಸಿದನು. ಸ್ವಾಮೀಜಿಯವರು ಆಶ್ಚರ್ಯದಿಂದ ಬಹುಶಃ ಅವನು ಬೇರೆ ಯಾರನ್ನೋ ಹುಡುಕುತ್ತಿರಬೇಕೆಂದು, ತಮಗೆ ಅವನ ಪರಿಚಯವಿಲ್ಲವೆಂದು ಹೇಳಿದರು. ಆದರೆ ಆ ಭಕ್ತನು ತಾನು ಹುಡುಕುತ್ತಿದ್ದದ್ದು ಅವರನ್ನೇ ಎಂದು ಹೇಳುತ್ತಾ ತನಗೆ ಉಂಟಾದ ಕನಸಿನ ಬಗ್ಗೆ ಅವರಿಗೆ ವಿವರವಾಗಿ ಹೇಳಿದನು. ಆ ಭಕ್ತನು ಅಂದು ಮಧ್ಯಾಹ್ನ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ ಅವನ ಕನಸಿನಲ್ಲಿ ಶ್ರೀರಾಮನು ಬಂದು ತನ್ನ ಭಕ್ತ ನಿಲ್ದಾಣದಲ್ಲಿ ಹಸಿವು-ಬಾಯಾರಿಕೆಯಿಂದ ನರಳುತ್ತಿರುವುದು ಮತ್ತು ಬೇಗನೆ ಆಹಾರ-ನೀರನ್ನು ತೆಗೆದುಕೊಂಡು ಹೋಗಲು ಆಜ್ಞೆ ಮಾಡಿದ ವೃತ್ತಾಂತವನ್ನು ಹೇಳಿದನು. ಇದನ್ನು ಕೇಳಿದ ಸ್ವಾಮೀಜಿಯವರಿಗೆ

ಆಶ್ಚರ್ಯ-ಆನಂದ ಉಂಟಾಯಿತು. ಅವರು ಮರುಮಾತ ನಾಡದೆ ಅವನು ತಂದ ಆಹಾರವನ್ನು ಸೇವಿಸಿದರು. ಈ ಎಲ್ಲಾ ಅದ್ಭುತ ಘಟನೆಯನ್ನು ದೂರದಿಂದಲೇ ನೋಡುತ್ತಿದ್ದ ಆ ಶ್ರೀಮಂತ ವ್ಯಕ್ತಿಗೆ ತನ್ನ ತಪ್ಪಿನ ಅರಿವಾಗಿ ಸ್ವಾಮೀಜಿಯವರಿಗೆ ನಮಸ್ಕರಿಸುತ್ತಾ ಅವರಲ್ಲಿ ಕ್ಷಮೆಯನ್ನು ಯಾಚಿಸಿದನು.

**೪. ಪರಿವ್ರಾಜಕರಾಗಿ ಭಾರತದ ಭ್ರಮಣೆಯಲ್ಲಿ:** ಬಹತಾ ಪಾನಿ-ಚಲತಾ ಸಾಧು ಎನ್ನುವ ಹಿಂದಿ ಭಾಷೆಯ ನಾಣ್ಣುಡಿಯಂತೆ (ಹರಿಯುವ ನೀರು-ಅಲೆಯುವ ಸಾಧು) ಸಂನ್ಯಾಸಿಯು ಯಾವಾಗಲೂ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗುತ್ತಿರುತ್ತಾನೆ. ಸಂನ್ಯಾಸಿಯು ತೀರ್ಥಯಾತ್ರಾ ಪ್ರೇಮಿ. ಒಬ್ಬಂಟಿಯಾಗಿ ಭಗವಂತನ ಮೇಲೆ ಭಾರ ಹಾಕಿ ಬಿಡಿಗಾಸು ಇಲ್ಲದೆ ಸ್ವಚ್ಛಂದವಾಗಿ ಅಲೆಯುವುದು ಪುರಾತನ ಕಾಲದಿಂದಲೂ ಸಂನ್ಯಾಸಿಯ ಪದ್ಧತಿಯಾಗಿದೆ. ಸ್ವಾಮಿ ವಿವೇಕಾನಂದರ ಮನದಲ್ಲಿಯೂ ಸಹ ಈ ರೀತಿಯ ಪರಿವ್ರಾಜಕ ಜೀವನದ ಕಾತರತೆಯನ್ನು ನಾವು ಈಗಾಗಲೇ ಗಮನಿಸಿದ್ದೇವೆ.

ಅದರಂತೆಯೆ ಅವರು ಬಹುಶಃ ೨೧ ಜುಲೈ ರವಿವಾರದಂದು ಹೊರಟು ಮೊದಲಿಗೆ ಭಾಗಲಪುರ ವನ್ನು ತಲುಪಿದರು. ಭಾಗಲಪುರದಲ್ಲಿ ಕೆಲಕಾಲವಿದ್ದ ನಂತರ ಅವರು ವೈದ್ಯನಾಥಕ್ಕೆ ಹೊರಟರು. ಈ ಯಾತ್ರೆಯನ್ನು ಅವರು ರೈಲುಗಾಡಿಯಲ್ಲಿ ಮಾಡಿದ್ದರೊ ಅಥವಾ ಕಾಲುನಡಿಗೆಯಲ್ಲಿ ಹೋಗಿದ್ದರೊ ಸರಿಯಾಗಿ ತಿಳಿದು ಬಂದಿಲ್ಲ. ಏನೇ ಆಗಲಿ ಅವರು ವೈದ್ಯನಾಥದಿಂದ ವಾರಾಣಸಿಗೆ ಹೋಗಿ, ಅಲ್ಲಿ ಪ್ರಮದಾದಾಸ ಬಾಬುವಿನ ಮನೆಯಲ್ಲಿ ಉಳಿದುಕೊಂಡರು. ನಂತರದ ಅವರ ಪ್ರಯಾಣ ಅಯೋಧ್ಯಾ ನಗರಿಯ ಕಡೆಗೆ ಸಾಗಿತು. ಅಲ್ಲಿಂದ ಅವರು ನೈನಿತಾಲ್, ಆಲ್ಮೋರಕ್ಕೆ ಹೋದರು.

೧೮೯೧ರ ಫೆಬ್ರವರಿ ತಿಂಗಳ ಮೊದಲ ಭಾಗದಲ್ಲಿ ಒಂದು ದಿನ ಬೆಳಿಗ್ಗೆ ರೈಲುಗಾಡಿಯಲ್ಲಿ ಆಳ್ವಾರ್ ನಗರಕ್ಕೆ ಹೊರಟರು. ಆಳ್ವಾರಿನಲ್ಲಿ ಸ್ವಾಮೀಜಿಯವರು ಮುಸಲ್ಮಾನ ಸಮುದಾಯದವರೊಂದಿಗೆ ಮತ್ತು ಇತರ ಗಣ್ಯ ವ್ಯಕ್ತಿಗಳೊಂದಿಗೆ ವಾಸಿಸಿದರು. ರಾಜ ಮಂಗಲಸಿಂಗ್ ಒಮ್ಮೆ ರಾಜಸಭೆಯಲ್ಲಿ ಮೂರ್ತಿ ಪೂಜೆಯ ಬಗ್ಗೆ ಸ್ವಾಮೀಜಿಯವರೊಂದಿಗೆ ಚರ್ಚಿಸಿದಾಗ ಅವರು ಅತ್ಯಂತ ಮನೋಜ್ಞವಾಗಿ ವಿವರಣೆ ನೀಡುತ್ತಾರೆ. ಅಲ್ಲಿ ಸ್ವಾಮೀಜಿ ೨ ತಿಂಗಳ ಕಾಲವಿದ್ದರು. ೨೮ನೆಯ ಮಾರ್ಚ್ ಅವರು ಆಳ್ವಾರಿನಿಂದ ಹೊರಟು ೧೮ ಕಿ.ಮೀ. ದೂರದ ಪಾಂಡುಮೋಲ ಎನ್ನುವ ಸ್ಥಳಕ್ಕೆ ಹೋದರು. ಅಲ್ಲಿ ಹನುಮಾನ್ ಮಂದಿರದಲ್ಲಿ ರಾತ್ರಿ ವಾಸ ಮಾಡಿ ನಂತರ ಅವರು ನಾರಾಯಣಿ ಗ್ರಾಮವನ್ನು ತಲುಪಿ ಅಲ್ಲಿ ರಾತ್ರಿಯನ್ನು ಕಳೆದರು. ಮರುದಿನ ಅವರು ಬಸವಾ ಎನ್ನುವ ರೈಲು ನಿಲ್ದಾಣಕ್ಕೆ ಹೋಗಿ ಅಲ್ಲಿಂದ ರೈಲಿನಲ್ಲಿ ಜಯಪುರಕ್ಕೆ ಪ್ರಯಾಣ ಮಾಡಿದರು. ಸ್ವಲ್ಪ ದೂರದ ಊರಿನ ನಿಲ್ದಾಣದಲ್ಲಿ ಆಳ್ವಾರಿನಲ್ಲಿ ಪರಿಚಿತನಾಗಿದ್ದ ಒಬ್ಬ ಭಕ್ತ ಆ ರೈಲಿನಲ್ಲಿಯೇ ಅವರೊಡನೆ ಜಯಪುರಕ್ಕೆ ತಲುಪಿದ ನಂತರ ಆ ಭಕ್ತನು ಸ್ವಾಮೀಜಿಯವರ ಒಂದು ಭಾವಚಿತ್ರ ತೆಗೆಸುವ ಸಲುವಾಗಿ ಅವರನ್ನು ತುಂಬಾ ಒತ್ತಾಯಿಸಿದನು. ಸ್ವಾಮೀಜಿಯವರಿಗೆ ಇಚ್ಛೆಯಿಲ್ಲದಿದ್ದರೂ ಸಹ ಭಕ್ತನ ಒತ್ತಾಯಕ್ಕೆ ಮಣಿದು ಸಮ್ಮತಿ ನೀಡಿದರು. ಇದೇ ಸ್ವಾಮೀಜಿಯವರ ಪ್ರಥಮ ಪರಿವ್ರಾಜಕ ಭಾವಚಿತ್ರ.

ಜಯಪುರದಲ್ಲಿ ಸ್ವಾಮೀಜಿ ಎರಡು ವಾರಗಳಿದ್ದರು. ಜಯಪುರದಿಂದ ಅವರು ಒಮ್ಮೆ ಅಜ್ಮೀರವನ್ನು ನೋಡಿಕೊಂಡು ನಂತರ ಅಬು ಪರ್ವತಕ್ಕೆ ೧೪ನೆಯ ಏಪ್ರಿಲ್ ೧೮೯೧ರಲ್ಲಿ ಹೋದರು.

ಅಜ್ಮೀರ್ ಮತ್ತು ಜಯಪುರದ ಮೂಲಕ ೭ನೆಯ ಆಗಸ್ಟ್ ಖೇತ್ರಿಗೆ ಅವರು ಹೋದರು. ೨೭ನೆಯ ಅಕ್ಟೋಬರ್ ಅವರು ಖೇತ್ರಿಯನ್ನು ಬಿಟ್ಟು ಮೊದಲು ಅಜ್ಮೀರ್‌ಗೆ ಹೋದರು ಮತ್ತು ಅಲ್ಲಿಂದ ಅಲಹಾಬಾದಿನ ಕಡೆ ಮುಂದಿನ ಪ್ರಯಾಣ ಮಾಡಿದರು. ರಾಜಸ್ಥಾನದಲ್ಲಿ ರೈಲು ಪ್ರಯಾಣ ಮಾಡುವಾಗ ಒಮ್ಮೆ ನಡೆದ ಘಟನೆ ಇಲ್ಲಿ ಉಲ್ಲೇಖನೀಯ. ಅವರ ಬೋಗಿಯಲ್ಲಿದ್ದ ಇಬ್ಬರು ಆಂಗ್ಲ ಯಾತ್ರಿಕರು ಅವರನ್ನು ಸಾಧಾರಣ ಸಾಧುವೆಂದು ಭಾವಿಸಿ, ಅವರ ಬಗ್ಗೆ ಆಂಗ್ಲಭಾಷೆಯಲ್ಲಿ ಅಪಹಾಸ್ಯ ಮಾಡತೊಡಗಿದರು. ಸ್ವಾಮೀಜಿಯವರು ಅದರ ಬಗ್ಗೆ ಏನು ಅರಿಯದವರಂತೆ ಹಾಗೆಯೇ ನಿರ್ವಿಕಾರಚಿತ್ತದಿಂದ ಕುಳಿತಿದ್ದರು. ಸ್ವಲ್ಪ ಸಮಯದ ಬಳಿಕ ರೈಲು ಒಂದು ನಿಲ್ದಾಣದಲ್ಲಿ ನಿಂತಾಗ ಅವರು ನಿಲ್ದಾಣದ ಅಧಿಕಾರಿಯ ಬಳಿ ಆಂಗ್ಲಭಾಷೆಯಲ್ಲಿ ಒಂದು ಲೋಟ ನೀರನ್ನು ಕೇಳಿದರು. ಅಲ್ಲಿಯೇ ಇದ್ದ ಆ ಆಂಗ್ಲ ಸಹಪ್ರಯಾಣಿಕರಿಗೆ ತುಂಬಾ ನಾಚಿಕೆ ಮತ್ತು ಆಶ್ಚರ್ಯವಾಯಿತು. ಅವರುಗಳು ಸ್ವಾಮೀಜಿಯವರನ್ನು, ''ನೀವು ಎಲ್ಲವನ್ನು ಕೇಳಿಯೂ ಸಹ ಹೇಗೆ ಸ್ವಲ್ಪವೂ ಕೋಪವನ್ನು ತೋರದೆ ಕುಳಿತಿದ್ದೀರಿ?'' ಎಂದು ಕೇಳಿದರು. ಇದಕ್ಕೆ ಉತ್ತರಿಸುತ್ತಾ ಸ್ವಾಮೀಜಿಯವರು, ''ನೋಡಿ ಗೆಳೆಯರೆ, ಅಹಂಕಾರಿ ಮೂರ್ಖರ ಜೊತೆ ಸಂಪರ್ಕಕ್ಕೆ ಬರುತ್ತಿರುವುದು ನನ್ನ ಜೀವನದಲ್ಲಿ ಇದು ಹೊಸತೇನಲ್ಲ'' ಎಂದರು. ಇದನ್ನು ಕೇಳಿ ಅವರುಗಳಿಗೆ ಕೋಪ ಬಂದಿರಬೇಕು, ಆದರೆ, ಸ್ವಾಮೀಜಿಯವರ ತೇಜಸ್ಸಿನಿಂದ ಕೂಡಿದ ಗಾಂಭೀರ್ಯಪೂರ್ಣ ಮುಖವನ್ನು ಕಂಡು ಅವರುಗಳ ಕೋಪ ತಣ್ಣಗಾಗಿ ಕೊನೆಗೆ ಕ್ಷಮೆಯನ್ನು ಯಾಚಿಸಿದರು.

ಅನೇಕ ಕಾಲದ ನಂತರ ಒಮ್ಮೆ ಸ್ವಾಮೀಜಿಯವರು ಗಿರೀಶಚಂದ್ರ ಘೋಷನಿಗೆ ತಮ್ಮ ಪರಿವ್ರಾಜಕ ಜೀವನದ ಘಟನೆಗಳನ್ನು ಹೇಳುವಾಗ ತಾವು ರಾಜಸ್ಥಾನದ ಪಯಣಿಸುವಾಗ ಒಂದು ರೈಲು ನಿಲ್ದಾಣದಲ್ಲಿ ನಡೆದ ಘಟನೆ ವಿವರಿಸುತ್ತಾರೆ. ತಾವು ರೈಲು ನಿಲ್ದಾಣದಲ್ಲಿ ಮುಂದಿನ ಪ್ರಯಾಣಕ್ಕಾಗಿ ರೈಲು ಬರುವುದನ್ನು ಕಾಯುತ್ತಿದ್ದಾರೆ. ಆದರೆ, ಯಾವುದೋ ಕಾರಣದಿಂದಾಗಿ ಮೂರು ದಿನಗಳವರೆಗೂ ಅಲ್ಲಿಯೇ ಅವರಿಗೆ ಇರಬೇಕಾಯಿತು. ಆ ಸಮಯದಲ್ಲಿ ಅನೇಕ ಜನರು ಅವರ ಬಳಿಗೆ ಬಂದು ಧರ್ಮ- ಆಧ್ಯಾತ್ಮಿಕ ವಿಷಯಗಳ ಚರ್ಚೆಯನ್ನು ಮಾಡತೊಡಗಿದರು. ದಿನ-ರಾತ್ರಿ ಜನರು ಬಂದು ಹೋಗುತ್ತಿದ್ದರು ಮತ್ತು ಸ್ವಾಮೀಜಿ ಅವರ ಸಮಸ್ಯೆಗಳಿಗೆ ಪರಿಹಾರ ನೀಡುತ್ತಿದ್ದರು. ಆದರೆ, ಯಾರೂ ಸಹ ಸ್ವಾಮೀಜಿ

ಯವರ ಆಹಾರ-ಪಾನ-ವಿಶ್ರಾಂತಿಯ ಬಗ್ಗೆ ವಿಚಾರಿಸುತ್ತಿರಲಿಲ್ಲ ಮತ್ತು ಅವರೂ ಸಹ ಆ ಬಗ್ಗೆ ಏನನ್ನೂ ಸಹ ಹೇಳುತ್ತಿರಲಿಲ್ಲ. ಮೂರನೆಯ ದಿನ ರಾತ್ರಿಯ ವೇಳೆ ಎಲ್ಲರೂ ಹೊರಟು ಹೋದ ಮೇಲೆ ಒಬ್ಬ ಬಡವ್ಯಕ್ತಿಯು ಅವರ ಬಳಿ ಬಂದು ''ಸ್ವಾಮೀಜಿ ನೀವು ಮೂರು ದಿನಗಳಿಂದ ಅನವರತ ಮಾತನಾಡುತ್ತಿದ್ದೀರಿ, ನೀರನ್ನೂ ಸಹ ಕುಡಿಯಲಿಲ್ಲ, ಇದನ್ನು ನೋಡಿ ನನಗೆ ತುಂಬಾ ದುಃಖವಾಗುತ್ತಿದೆ'' ಎಂದು ಹೇಳಿದನು. ಆಗ ಸ್ವಾಮೀಜಿಯವರಿಗೆ ಸ್ವತಃ ಭಗವಂತನೇ ಇವನ ವೇಷದಲ್ಲಿ ಬಂದಿರುವನೆಂದು ಅನಿಸಿತು. ಅವರು ಅವನನ್ನು ಕೇಳಿದರು, ''ನೀನು ನನಗೆ ಏನನ್ನಾದರೂ ತಿನ್ನಲು ಕೊಡುವೆಯಾ'' ಎಂದು. ಅದಕ್ಕೆ ಅವನು ಅತ್ಯಂತ ವಿನಯದಿಂದ ಹೇಳಿದನು. ''ನನ್ನ ಹೃದಯವಾದರೂ ಸಹ ಅದನ್ನೇ ಬಯಸುತ್ತಿದೆ, ಆದರೆ, ನಾನು ತಯಾರಿಸಿದ ರೊಟ್ಟಿಗಳನ್ನು ನಿಮಗೆ ಹೇಗೆ ಕೊಡಲಿ? ನೀವು ಒಪ್ಪುವುದಾದರೆ ನಾನು ರೊಟ್ಟಿಯ ಹಿಟ್ಟನ್ನು ಬೇಳೆಗಳನ್ನು ತಂದು ಕೊಡುವೆ. ನೀವೇ ರೊಟ್ಟಿ ತೊವ್ವೆ ಮಾಡಿಕೊಳ್ಳಿ'' ಆದರೆ ಸ್ವಾಮೀಜಿಯವರು ಆಗ ಸಂನ್ಯಾಸ ಧರ್ಮದ ಅನುಸಾರ ಅಗ್ನಿಸ್ಪರ್ಶ ಮಾಡುವುದಿಲ್ಲ ಎನ್ನುವ ನಿಯಮವನ್ನು ಪಾಲಿಸುತ್ತಿದ್ದರು. ಆದ್ದರಿಂದ ಅವನಿಗೆ ಹೇಳಿದರು, ''ನೀನು ತಯಾರಿಸಿದ ರೊಟ್ಟಿಗಳನ್ನೇ ತಂದುಕೊಡು, ನಾನು ಅದನ್ನೇ ತಿನ್ನುವೆ'' ಎಂದು. ಇದನ್ನು ಕೇಳಿ ಅವನು ಭಯದಿಂದ ತಾನು ಚಮ್ಮಾರನೆಂದೂ, ನಾನು ಸಂನ್ಯಾಸಿಗೆ ಆಹಾರ ನೀಡಿದರೆ ರಾಜನು ಘೋರವಾದ ಶಿಕ್ಷೆಯನ್ನು ನೀಡಿ ರಾಜ್ಯದಿಂದ ಹೊರಹಾಕುವನೆಂದೂ ತಿಳಿಸಿದನು. ಸ್ವಾಮೀಜಿಯವರು ಅವನಿಗೆ, '' ಭಯಪಡಬೇಡ, ರಾಜ ನಿನಗೆ ಶಿಕ್ಷೆಯನ್ನು ನೀಡುವುದಿಲ್ಲ'' ಎಂದು ಆಶ್ವಾಸನೆ ನೀಡಿದರು. ಇದರಿಂದ ಅವನಿಗೆ ಎಷ್ಟರಮಟ್ಟಿಗೆ ಸಮಾಧಾನವಾಯಿತೆಂದು ತಿಳಿಯದು. ಆದರೆ ಒಬ್ಬ ಸಾಧು ಹಸಿವೆಯಿಂದ ಇರುವುದನ್ನು ಕಂಡು ತಾಳದೆ ಅವರಿಗೆ ರೊಟ್ಟಿ-ತೊವ್ವೆ ತಯಾರಿಸಿ ತಂದುಕೊಟ್ಟನು. ಅದನ್ನು ಸ್ವಾಮೀಜಿಯವರು ಅತ್ಯಂತ ಕೃತಜ್ಞತೆಯಿಂದ ಸ್ವೀಕರಿಸಿದರು. ಅದರ ಬಗ್ಗೆ ನೆನೆಸಿಕೊಳ್ಳುತ್ತಾ ಸ್ವಾಮೀಜಿಯವರು ಆ ಸಮಯದಲ್ಲಿ ಇಂದ್ರನು ಸ್ವರ್ಣಪಾತ್ರೆಯಲ್ಲಿ ಅಮೃತವನ್ನು ತಂದುಕೊಟ್ಟರೂ ಸಹ ಅದರಂತೆ ತೃಪ್ತಿಕರವಾಗುತ್ತಿರಲಿಲ್ಲವೇನೋ! ಎಂದು ಹೇಳಿದರು. ಆ ಸಮಯದಲ್ಲಿ ಆ ವ್ಯಕ್ತಿಯ ದಯೆ-ಕರುಣೆಯನ್ನು ಕಂಡು ಸ್ವಾಮೀಜಿಯವರ ನಯನದಲ್ಲಿ ಅಶ್ರು ತುಂಬಿತು ಮತ್ತು ಅವರು ಭಾವಿಸಿದರು, ಇಂತಹ ನೂರಾರು ಉನ್ನತ ವ್ಯಕ್ತಿಗಳು ಗುಡಿಸಿಲಿನಲ್ಲಿ ವಾಸಿಸುತ್ತಿದ್ದಾರೆ, ಆದರೆ, ನಮ್ಮ ದೃಷ್ಟಿಯಲ್ಲಿ ಅವರೆಲ್ಲರೂ ಸಹ ಎಂದೆಂದಿಗೂ ಕೆಳ ಮತ್ತು ಹೀನವರ್ಗದವರು. ಸ್ವಾಮೀಜಿಯವರು ಹೀಗೆ ಚಮ್ಮಾರನು ನೀಡಿದ ಆಹಾರ ಸ್ವೀಕರಿಸುತ್ತಿರುವುದನ್ನು ಕಂಡು ನಿಲ್ದಾಣದ ಒಬ್ಬ ವ್ಯಕ್ತಿ ತಾನು ಉಚ್ಚ ಕುಲದವನೆಂಬ ಅಹಂಕಾರದಿಂದ ''ನೀವು ಹೀಗೆ ನೀಚಕುಲದವನು ನೀಡಿದ ಆಹಾರವನ್ನು ಸ್ವೀಕರಿಸಿದಿರಿ, ಇದು ಸರಿಯೆ?'' ಎಂದು ಪ್ರಶ್ನಿಸುವ ಸಾಹಸ ಮಾಡಿದನು. ಇದಕ್ಕೆ ತೀವ್ರವಾಗಿ ಪ್ರತಿಕ್ರಿಯಿಸಿದ ಸ್ವಾಮೀಜಿಯವರು ''ನೀವೆಲ್ಲರೂ ಸಹ ಎಷ್ಟು ಜನ ನನ್ನನ್ನು ಮೂರು ದಿನಗಳಿಂದ ಸತತವಾಗಿ ಮಾತನಾಡುವಂತೆ ಮಾಡಿದ್ದೀರಿ. ಆದರೆ, ನಾನು ಏನಾದರೂ ತಿಂದಿರುವೆನೇ ಎನ್ನುವುದರ ಬಗ್ಗೆ ವಿಚಾರಿಸಿದಿರೇನು? ಆದರೂ ಸಹ ಈಗ ಈ ವ್ಯಕ್ತಿ ಕೆಳವರ್ಗದವನೆಂದು ಮತ್ತು ನೀವುಗಳು ಉನ್ನತ ವರ್ಗದ ಮಾನ್ಯ ವ್ಯಕ್ತಿಗಳೆಂದು ಬಡಾಯಿ ಕೊಚ್ಚಿಕೊಳ್ಳುತ್ತಿರುವಿರಿ? ಇದೋ ಇವನು ಮನುಷ್ಯತ್ವವನ್ನು ತೋರಿಸಿರುವನು. ಇವನನ್ನು ನೀಚ ಕುಲದವನು ಎಂದು ಹೇಗೆ ತಾನೇ ಕರೆಯಲು ಸಾಧ್ಯ?''. ಎಂದು ಗುಡುಗಿದರು. ಮುಂದೆ ಖೇತ್ರಿರಾಜನ ಜೊತೆ ಪರಿಚಯವಾದ ನಂತರ ಅವರು ರಾಜನಿಗೆ ಈ ಘಟನೆಯನ್ನು ಹೇಳಿ, ಅವರು ಆ ವ್ಯಕ್ತಿಯನ್ನು ಅರಮನೆಗೆ ಕರೆಯಿಸಿದರು. ಆ ವ್ಯಕ್ತಿಯು ತುಂಬಾ ಭಯದಿಂದ ನಡುಗುತ್ತಾ ರಾಜನ ಬಳಿಗೆ ಹೋದನು. ತನ್ನ ಹಣೆಯಲ್ಲಿ ಯಾವ ಶಿಕ್ಷೆ ಬರೆದಿದೆಯೋ ಎಂದು ಭಾವಿಸುತ್ತಿದ್ದ ಅವನಿಗೆ ರಾಜನು ಅತ್ಯಂತ ಪ್ರಶಂಸೆಯನ್ನು ಮಾಡಿ, ಅನೇಕ ಕಾಣಿಕೆಗಳನ್ನು ನೀಡಿ ಅವನ ದಾರಿದ್ರ್ಯವನ್ನು ದೂರ ಮಾಡಿದನು.

ಮುಂದೆ ಪ್ರಯಾಣ ಮಾಡುತ್ತಾ ಸ್ವಾಮೀಜಿಯವರು ಕಚ್, ಬಳಿಕ ಪೋರಬಂದರಿಗೆ ಹೋದರು. ಪೋರಬಂದರಿನಿಂದ ಅವರು ದ್ವಾರಕಾನಗರಿಗೆ ಹೋದರು. ಶ್ರೀಕೃಷ್ಣನ ಲೀಲಾಸ್ಥಳಗಳೆಲ್ಲಾ ಸಮುದ್ರದಲ್ಲಿ ಅಂತರ್ಗತವಾಗಿರುವುದರನ್ನು ನೋಡಿ, ಪುರಾತನ ಕಾಲದ ವೈಭವಗಳೆಲ್ಲವನ್ನು ನೆನಪಿಸಿಕೊಂಡರು. ದ್ವಾರಕಾದಿಂದ ಮಾಂಡವೀ, ನಾರಾಯಣ ಸರೋವರ ಮತ್ತು ಆಶಾಪುರಿಗೆ ಹೋದರು. ಇಷ್ಟು ದಿನಗಳಿಂದ ಸ್ವಾಮೀಜಿಯವರನ್ನು ಅನುಸರಿಸಿ ಅವರನ್ನು ಭೇಟಿ ಮಾಡುವ ಹಠತೊಟ್ಟಿದ್ದ ಸ್ವಾಮಿ ಅಖಂಡಾನಂದರಿಗೆ ಮಾಂಡವಿಯಲ್ಲಿ ಕೊನೆಗೂ ಸಹ ಸ್ವಾಮೀಜಿಯವರ ಭೇಟಿ ಸಾಧ್ಯವಾಯಿತು. ಸ್ವಾಮಿ ಅಖಂಡಾನಂದರನ್ನು ಕಂಡು ಸ್ವಾಮೀಜಿಯವರಿಗೆ ಮೊದಲು ಆನಂದವಾಯಿತು. ಆದರೆ, ಹೀಗೆ ತಮ್ಮನ್ನು ಹಿಂದೆ ಹಿಂದೆ ಅನುಸರಿಸದಿರಲು ಹೇಳಿ ಪುನಃ ಅವರು ಭುಜ್ ನಗರಕ್ಕೆ ಮರಳಿದರು. ಅಲ್ಲಿಂದ ಪೋರಬಂದರಿಗೆ ಹೋಗಿ ಕೆಲವು ದಿನಗಳಿದ್ದ ಬಳಿಕ ಅವರು ಮುಂಬೈ ನಗರಕ್ಕೆ ಹೋದರು. ಮುಂಬೈಯಿಂದ ಬರೋಡಾಕ್ಕೆ ಹೋಗಿ ಅಲ್ಲಿಂದ ಖಂಡವಾ ನಗರಕ್ಕೆ ಬಂದು ಹರಿದಾಸ ಚಟ್ಟೋಪಾಧ್ಯಾಯರ ಮನೆಯಲ್ಲಿ ೨ ವಾರಗಳು ಉಳಿದುಕೊಂಡರು. ಚಿಕಾಗೋ ನಗರದಲ್ಲಿ ನಡೆಯಲಿರುವ ಸರ್ವಧರ್ಮ ಸಮ್ಮೇಳನ ಸಭೆಯ ಬಗ್ಗೆ ಹರಿದಾಸರೊಂದಿಗೆ ಚರ್ಚೆ ನಡೆಸಿದರು. ಜುಲೈ ೧೮೯೨ರಲ್ಲಿ ಅವರು ಖಂಡವಾವನ್ನು ಬಿಟ್ಟು ಪುನಃ ಮುಂಬೈಗೆ ತೆರಳಿದರು. ಮುಂಬೈನಿಂದ ಪೂನಾ ನಗರಕ್ಕೆ ಹೋಗಿ ಬಾಲಗಂಗಾಧರ ತಿಲಕರ ಮನೆಯಲ್ಲಿ ವಾಸ್ತವ್ಯ ಹೂಡಿದರು. ಆ ವರ್ಷದ ಬೇಸಿಗೆಯಲ್ಲಿ ಲಿಮ್ಡ ರಾಜನು ಮಹಾಬಲೇಶ್ವರಕ್ಕೆ ಬಂದಿದ್ದನು. ಆದ್ದರಿಂದ ಅವನನ್ನು ಭೇಟಿಯಾಗಲು ಅವರು ಮಹಾಬಲೇಶ್ವರಕ್ಕೆ ಹೋಗಿ ಪುನಃ ಪೂನಾ ನಗರಕ್ಕೆ ಮರಳಿ ಅಲ್ಲಿಂದ ಕೊಲ್ಲಾಪುರ ನಗರಕ್ಕೆ ಹೋದರು. ಅಲ್ಲಿ ಕೆಲಕಾಲವಿದ್ದ ಬಳಿಕ ಅಕ್ಟೋಬರ್‌ನಲ್ಲಿ ಬೆಳಗಾಂ ನಗರಕ್ಕೆ ಮುಂದಿನ ಪ್ರಯಾಣ ಮಾಡಿದರು.